ಸಂಪುಟ: ೦೬/ ಸಂಚಿಕೆ: ೨೯೭/ರವಿವಾರ ದಿನಾಂಕ : ೨೬-೦೧-೨೦೨೫/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

# ಬೆಳಗಿನ ಸೂರ್ಯೋದಯ

ಕನ್ನಡ ಪ್ರಾದೇಶಿಕ ದಿನಪತ್ರಿಕೆ

ಬೆಳಗಾವಿ ■ ಧಾರವಾಡ ■ ಬಾಗಲಕೋಟ ■ ವಿಜಯಪುರ ■ ಗದಗ ■ ಕೊಪ್ಪಳ ■ ಹಾವೇರಿ ■ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ. ಕದಮ, Editor : GURURAJ IRAPPA. KADAM Cell : 9620099959

Volume : 06/ ISSUE : 297/ SUNDAY Date : 26-01-2025/ RNI No. KARKAN/2019/77640/ Postal Reg No. PMG/KA/NK/BM/135/25-26 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00

## ಮೈಕ್ರೋ ಫೈನಾನ್ಸ್ ಕಿರುಕುಳದಿಂದ ಸಾಲಗಾರರ ಹಿತ ಕಾಪಾಡಲು ಶೀಘ್ರ ಕಾನೂನು ರಚನೆ: ಮುಖ್ಯಮಂತ್ರಿ

ಬೆಂಗಳೂರು : "ಮೈಕ್ರೋ ಫೈನಾನ್ಸ್ ಸಂಸ್ಥೆಗಳು, ಲೇವಾದೇವಿದಾರರ ಕಿರುಕುಳದಿಂದ ಸಾಲಗಾರರ ಹಿತ ಕಾಪಾಡಲು ಶೀಘ್ರದಲ್ಲೇ ಕಾನೂನು ರೂಪಿಸಲಾಗುವುದು" ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಗೃಹಕಚೇರಿ ಕೃಷ್ಣಾದಲ್ಲಿ ಸಭೆ ಬಳಿಕ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, "ಮೈಕ್ರೋ ಫೈನಾನ್ಸ್‌ಗಳಿಂದ ಸಾಲ ಪಡೆಯುವವರ ಹಿತ ಕಾಪಾಡಲು ಸರ್ಕಾರ ಬದ್ಧವಾಗಿದೆ. ಸಾಲಗಾರರಿಗೆ ಕಿರುಕುಳ ನೀಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು. ಆದಷ್ಟು ಬೇಗನೆ ಸುಗ್ರೀವಾಜ್ಞೆ ಮೂಲಕ ಹೊಸ ಕಾನೂನು ಜಾರಿ ಮಾಡಲಾಗುವುದು" ಎಂದು ಭರವಸೆ ನೀಡಿದರು. "ಬಲವಂತದ ಸಾಲ ವಸೂಲಾತಿ ಮಾಡುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ, ಈ ಕುರಿತು ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳಲು ಸಾಧ್ಯವಾಗುವಂತೆ ಕಾನೂನಿನಲ್ಲಿ ಅವಕಾಶ ಇರಲಿದೆ. ಈಗಿರುವ ಕಾನೂನು ಇನ್ನಷ್ಟು ಬಲಪಡಿಸಲು ಕ್ರಮವಹಿಸಲಾಗುತ್ತದೆ. ಇದರಲ್ಲಿ ಪೊಲೀಸರಿಗೆ ಹೆಚ್ಚಿನ ಅಧಿಕಾರ ನೀಡಲಾಗುತ್ತದೆ. ನೋಂದಣಿಯಾಗದ ಲೇವಾದೇವಿಗಾರರ ಮೇಲೆ ನಿಯಂತ್ರಣ- ಕ್ಕೆ ಹೊಸ ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗುವುದು" ಎಂದರು.

ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾ- ರಿಗಳಿಂದ ಸಭೆ: "ಆರ್‌ಬಿಐ ಅಧಿಕಾರಿಗಳು, ನಬಾರ್ಡ್ ಅಧಿಕಾರಿಗಳು ಸಭೆಯಲ್ಲಿ ಭಾಗಿಯಾಗಿದ್ದರು. ಮೈಕ್ರೋ ಫೈನಾನ್ಸ್ ಸಂಘದವರಿಂದ ಹಾಗೂ ಆರ್??ಬಿಐ ಪ್ರತಿನಿಧಿಗಳಿಂದ ಅಭಿಪ್ರಾಯ ಕೇಳಿದ್ದೇನೆ. ಅವರ ಅಭಿಪ್ರಾಯ ಕೇಳಿದ ಮೇಲೆ ಯಾರೂ ಕೂಡ ಸಾಲ ಕೊಡಬೇಡಿ, ವಸೂಲು ಮಾಡಬೇಡಿ ಅಂತ ಹೇಳಲ್ಲ.



ಆದರೆ, ವಸೂಲು ಮಾಡುವಾಗ ಕಿರುಕುಳ ನೀಡಬಾರದು, ವಸೂಲಿ ಮಾಡುವಾಗ ಆರ್‌ಬಿಐ ನಿಯಮ ಪಾಲಿಸಲು ಸೂಚನೆ ನೀಡಿದ್ದೇನೆ. ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾ- ರಿಗಳು ಹಾಗೂ ಜಿಲ್ಲಾ ಪೊಲೀಸ್ ವ- ರಿಷ್ಠಾಧಿಕಾರಿಗಳು ಸಭೆ ನಡೆಸಿ ಈ ಕುರಿತ ಜನರಿಗೆ ಸೂಕ್ತ ತಿಳಿವಳಿಕೆ ಹಾಗೂ ಮೈಕ್ರೋ ಫೈನಾನ್ಸ್‌ನವರಿಗೆ ಎಚ್ಚರಿಕೆ ನೀಡಬೇಕು" ಎಂದು ತಿಳಿಸಿದರು.

ಬೇರೆ ರಾಜ್ಯಗಳಲ್ಲಿನ ಕಾನೂನು ಪರಿಶೀಲನೆ: "ಕಾನೂನು ಮೀರಿ ಬಡ್ಡಿ ಮೊತ್ತ ಕೇಳಬಾರದು. ಸಂಜೆ 5 ಗಂಟೆ ಬಳಿಕ ಸಾಲ ವಸೂಲಿ ಮಾಡಬಾರದು. ಹೊರಗುತ್ತಿಗೆ ಮೂಲಕ ವಸೂಲಿ ಮಾಡಬಾರದು ಎಂದು ಸೂಚನೆ ನೀಡಿದ್ದೇನೆ. ಆ ಮೂಲಕ ರೌಡಿಗಳ ಬಳಕೆ ಮಾಡಲಾಗುತ್ತಿದೆ ಎಂದು ತಿಳಿದು ಬಂದಿದೆ. ಈ ಸಂಬಂಧ ಮನಿ ಲ್ಯಾಂಡ್ರಿಗ್ ಕಾನೂನಿಗೆ ಕೂಡಲೇ ತಿದ್ದುಪಡಿ ಮಾಡುತ್ತೇವೆ. ಅದರ ಜೊತೆಗೆ ಕೂಡಲೇ ಹೊಸ ಕಾನೂನು ರೂಪಿಸುತ್ತೇವೆ. ಸಾಲಗಾರರ ಹಿತರಕ್ಷಣೆಗಾಗಿ ಈ ಕಾನೂನು ತರುತ್ತಿದ್ದೇವೆ. ಬೇರೆ ರಾಜ್ಯಗಳಲ್ಲಿನ ಕಾನೂನುಗಳನ್ನು ಪರಿಶೀಲಿಸಲಿದ್ದೇವೆ. ಆಂಧ್ರದಲ್ಲಿನ ಕಾನೂನು ನೋಡಿ, ಕೂಡಲೇ ಕಠಿಣ ಕಾನೂನು ರಚಿಸಿ ಆ ಸಂಬಂಧ ಸುಗ್ರೀವಾಜ್ಞೆ ಹೊರಡಿಸುತ್ತೇವೆ" ಎಂದರು.

**ಡಿಸಿ ಕಚೇರಿಯಲ್ಲಿ ಸಹಾಯವಾಣಿ:** "ಈ ಬಗ್ಗೆ ಪ್ರತಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಒಂದು ಸಹಾಯವಾಣಿ ತೆರೆಯಲಾಗುವುದು. ಅಲ್ಲಿಗೆ ದೂರು ಕೊಡಬಹುದಾಗಿದೆ. ದೂ- ರಿನ ಮೇಲೆ ಅಥವಾ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿ ಕ್ರಮ ತೆಗೆದುಕೊಳ್ಳುವ ಕೆಲಸ ಮಾಡಲಾಗುತ್ತದೆ. ಗೂಂಡಾಗಳನ್ನು ಬಳಸಿ, ಹೆದರಿಸಿ ಬೆದರಿಸಿ ಸಾಲ ವಸೂಲಿ ಮಾಡುವ ಪ್ರಕರಣ ಸಂಬಂಧ ಕಾನೂನು ಕ್ರಮ ತೆಗೆದುಕೊಳ್ಳಲು ಸೂಚನೆ ನೀಡಿದ್ದೇವೆ" ಎಂದು ಮಾಹಿತಿ ನೀಡಿದರು.

ಕೇಂದ್ರಕ್ಕೆ ಪತ್ರ ಬರೆಯಲಾಗುವುದು: "ಕಿರುಕುಳ ತಪ್ಪಿಸಲು ಕಾನೂನು ಮಾಡುವಂತೆ ಕೇಂದ್ರ ಸರ್ಕಾರಕ್ಕೂ ಕೂಡ ಒತ್ತಾಯ ಮಾಡುತ್ತೇವೆ. ಏಕೆಂದರೆ ಆರ್‌ಬಿಐಯಡಿ ಮೈಕ್ರೋ ಫೈನಾನ್ಸ್‌ಗಳು ಬರುತ್ತವೆ. Banning of unregulated lending Activities ಕುರಿತು ಕೇಂದ್ರ ಸರ್ಕಾರ ಕರಡು ಸಿದ್ಧಪಡಿಸಿದೆ. ಈ ಕುರಿತು ಸಮಗ್ರ ಸಮಾಲೋಚನೆ ನಡೆಸಿ, ಸಾಲದ ಸುಳಿಯಲ್ಲಿ ಸಿಲುಕಿರುವವರ ಹಿತ ಕಾಪಾಡಲು ಕ್ರಮ ಕೈಗೊಳ್ಳಬೇಕು. ಕಿರುಕುಳ ತಪ್ಪಿಸಲು ಸೂಕ್ತ ಕಾನೂನು ರಚಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು" ಎಂದು ಸಿಎಂ ತಿಳಿಸಿದರು.

"ಕೆಲ ಮೈಕ್ರೋ ಫೈನಾನ್ಸ್ ಸಂಸ್ಥೆಗಳು 29%, 28% ಬಡ್ಡಿ ವಸೂಲಿ ಮಾಡುತ್ತಿದೆ. 20,000 ರೂ. ಮಾತ್ರ ಸಾಲ ಕೊಡಲು ಅವಕಾಶ ಇದೆ. ಆದರೆ, ಮೈಕ್ರೋ ಫೈನಾನ್ಸ್‌ಗಳು 17.07% ಬಡ್ಡಿ ವಿಧಿಸಲು ಆರ್‌ಬಿಐ ನಿಯಮ ಇದೆ. ಅದನ್ನು ಮೀರಿ ಬಡ್ಡಿ ಹಾಕಲಾಗುತ್ತಿದೆ. ಇದನ್ನು ನಿಯಂತ್ರಿಸಲು ಹೊಸ ಕಾನೂನು ತರಲಾಗುವುದು. ಆರ್‌ಬಿಐ ಮೈಕ್ರೋ ಫೈನಾನ್ಸ್ ಅನ್ನು ನಿಯಂತ್ರಣ ಮಾಡದೇ ಇದ್ದರೆ ರಾಜ್ಯ ಸರ್ಕಾರ ಮಧ್ಯ ಪ್ರವೇಶಿಸಲಿದೆ ಎಂದಿದ್ದೇವೆ" ಎಂದು ಹೇಳಿದರು.

"ಮೈಕ್ರೋ ಫೈನಾನ್ಸ್ ಸಂಸ್ಥೆಗಳಲ್ಲಿ ಸುಮಾರು 59,367.76 ಕೋಟಿ ರೂ.ಗೂ ಹೆಚ್ಚು ಸಾಲ ವಸೂಲಿ ಬಾಕಿ ಇದೆ ಎಂದು ಮಾಹಿತಿ ನೀಡಿದ್ದಾರೆ. 1,09,88,332 ಸಾಲ ನೀಡಿದ ಖಾತೆಗಳಿವೆ. ರಾಜ್ಯದಲ್ಲಿ ಸುಮಾರು 3,090 ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಹಾಗೂ ಬ್ರಾಂಚ್?ಗಳು ಇವೆ. ನೋಂದಣಿಯಾಗಿರುವ ಮೈಕ್ರೋ ಫೈನಾನ್ಸ್ ಸಂಸ್ಥೆಗಳು 31 ಇವೆ. ಆದರೆ ಅನಧಿಕೃತ ಮೈಕ್ರೋ ಫೈನಾನ್ಸ್ ಸಂಸ್ಥೆಗಳೇ ಹೆಚ್ಚಿವೆ. ಈಗಾಗಲೇ 7 ಪ್ರಕರಣಗಳು ದಾಖಲಾಗಿವೆ. ಕೂಡಲೇ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಸೂಚನೆ ನೀಡಲಾಗಿದೆ. ಕಿರುಕುಳದಿಂದ ನಾಲ್ವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ" ಎಂದು ಸಿಎಂ ತಿಳಿಸಿದರು.

### ಮೈಕ್ರೋ ಫೈನಾನ್ಸ್‌ಗಳಿಗೆ ಸಿಎಂ ಖಡಕ್ ಎಚ್ಚರಿಕೆ

### ಸಾಲಗಾರರ ಮೇಲೆ ದಬ್ಬಾಳಿಕೆ ಸಹಿಸಲ್ಲ

ಬೆಂಗಳೂರು: ನಿಮ್ಮ ವ್ಯವಹಾರ ಹೆಚ್ಚಿಸಿಕೊಳ್ಳಲು ನಿಯಮ ಮೀರಿ ಒಬ್ಬರೇ ಸಾಲಗಾರರಿಗೆ ಮೇಲಿಂದ ಮೇಲೆ ಸಾಲ ಕೊಡುತ್ತಿದ್ದೀರಿ. ಸಾಲ ತೀರಿಸಲು ಸಾಧ್ಯವಾಗದಿದ್ದಾಗ ನಿಯಮ ಬಾಹಿರ ಕ್ರಮಕ್ಕೆ ಮುಂದಾಗುತ್ತಿದ್ದೀರಿ. ಇದನ್ನು ನಮ್ಮ ಸರ್ಕಾರ ಸಹಿಸುವುದಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಅವರು ಮೈಕ್ರೋ ಫೈನಾನ್ಸ್ ಸಂಸ್ಥೆಗಳನ್ನು ತರಾಟೆಗೆ ತೆಗೆದುಕೊಂಡರು.

ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಗಳ ಕಾರ್ಯಾಚರಣೆ ಮತ್ತು ಪರಿಣಾಮಗಳ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಕಚೇರಿ ಕೃಷ್ಣದಲ್ಲಿ ಸಭೆ ನಡೆಸಿದರು.

ನಿಮ್ಮ ಸಿಬ್ಬಂದಿ ನಿಯಮ ಬಾಹಿರವಾಗಿ ಸಾಲ ವಸೂಲಿಗೆ ಇಳಿಯುತ್ತಿರುವುದನ್ನು ನಿಯಂತ್ರಿಸಲು ಏನು ಮಾಡಿದ್ದೀರಿ? ಅಂತಹ ಸಿಬ್ಬಂದಿ ವಿರುದ್ಧ ನಿಮ್ಮ ಸಂಸ್ಥೆಗಳಿಂದ ಏನು ಕ್ರಮ ಕೈಗೊಂಡಿದ್ದೀರಿ?, ಸಾಲಗಾರರ ಮನೆ ಜಪ್ತಿ ಮಾಡುವ ಮೊದಲು ನೀವು ನ್ಯಾಯಾಲಯದಿಂದ ಅನುಮತಿ ಪಡೆದಿದ್ದೀರಾ?. ಕಾನೂನು ಕೈಗೆತ್ತಿಕೊಳ್ಳಲು ನಿಮ್ಮ ಸಿಬ್ಬಂದಿಗೆ ಅನುಮತಿ ಕೊಟ್ಟವರು ಯಾರು?. ಸಾಲ ವಸೂಲಿಗೆ ರೌಡಿಗಳನ್ನು ಬಳಸುತ್ತಿದ್ದೀರಾ ಎಂದು ನೋಂದಣಿ ಆಗಿ ಪರವಾನಗಿ ಪಡೆದಿರುವ ಮೈಕ್ರೋ ಫೈನಾನ್ಸ್ ಕಂಪನಿಗಳ ಮುಖ್ಯಸ್ಥರಿಗೆ ಸಿಎಂ ಸಿದ್ದರಾಮಯ್ಯ ಖಾರವಾಗಿ ಪ್ರಶ್ನಿಸಿದರು.

ರಿಸರ್ವ್ ಬ್ಯಾಂಕಿನ ಷರತ್ತು ಮತ್ತು ನಿಬಂಧನೆಗಳನ್ನು ಸಾಲಗಾರರಿಗೆ ಅವರ ಆಡು ಭಾಷೆಯಲ್ಲಿ ಅರ್ಥ ಮಾಡಿಸಿದ್ದೀರಾ?. ಋಃಋ ನಿಯಮ ಮೀರಿ ಸಾಲ ಕೊಡುತ್ತಿದ್ದೀರಾ?. ಮರುಪಾವತಿಯ ಸಾಮರ್ಥ್ಯ ಗಮನಿಸದೆ ಒಬ್ಬರೇ ಸಾಲಗಾರರಿಗೆ ಪದೇ ಪದೆ ಸಾಲ ಕೊಡುತ್ತಿರುವುದು ಏಕೆ?. ಸಾಲಗಾರರಿಗೆ ಸಾಲ ಕೊಡುವ ಮೊದಲು ಆದ- ಾರ್ ಏಜಅ ಮಾಡಿಸುತ್ತಿಲ್ಲ ಏಕೆ?. ಇದನ್ನು ಮಾಡಿಸಿದ್ದರೆ ಒಬ್ಬರೇ ಸಾಲಗಾರರಿಗೆ ಪದೇ ಪದೆ ಸಾಲ ಕೊಡುವುದು ತಪ್ಪುತ್ತಿತ್ತು ಎಂದು ಸಿಎಂ ತಿಳಿಸಿದರು.

ನಿಯಮಗಳನ್ನು ಉಲ್ಲಂಘಿಸಿ ಸಾಲ ನೀಡಿದ ಮೈಕ್ರೋ ಫೈನಾನ್ಸ್ ಕಂಪನಿಗಳ ಪರವಾನಗಿ ರದ್ದುಗೊಳಿಸಲು ಏನು ಕ್ರಮ ಕೈಗೊಂಡಿದ್ದೀರಿ ಎಂದು ಆರ್‌ಬಿಐ ಅಧಿಕಾರಿಗಳಿಗೆ ಸಿಎಂ ಪ್ರಶ್ನಿಸಿದರು. ಒಬ್ಬರೇ ಸಾಲಗಾರರು ಬೇರೆ ಬೇರೆ ಗುರುತಿನ ಚೀಟಿ (ಐಡಿ ಕಾರ್ಡ್) ಕೊಟ್ಟು ಸಾಲ ಪಡೆದಿರುವುದು ನಿಮ್ಮ ದಾಖಲೆಗಳಲ್ಲಿದೆ. ಆದರೆ ಸಾಲಗಾರರು ಈ ರೀತಿ



ದುರುಪಯೋಗ ಪಡಿಸಿಕೊಳ್ಳುವುದನ್ನು ತಪ್ಪಿಸಲು ಯಾವ ಪದ್ಧತಿ ಪಾಲಿಸುತ್ತಿದ್ದೀರಿ ಎಂದು ಮೈಕ್ರೋ ಫೈನಾನ್ಸ್ ಕಂಪನಿಗಳಿಗೆ ಸಿದ್ದರಾಮಯ್ಯ ಕೇಳಿದರು.

ಈ ವೇಳೆ ಆರ್‌ಬಿಐ ಪರವಾನಗಿ ಪಡೆದಿರುವ ಕಂಪನಿಗಳು ನಿಯಮಬಾಹಿರ ವಸೂಲಿಗೆ ಇಳಿದಿಲ್ಲ. ಆ ರೀತಿ ಮಾಡುತ್ತಿರುವುದು ಪರವಾನಗಿ ಇಲ್ಲದ ಕಂಪನಿಗಳು ಎಂದು ಮೈಕ್ರೋ ಫೈನಾನ್ಸ್?ನವರು ಸಮಜಾಯಿಶಿ ನೀಡಿದರು. ಇದಕ್ಕೆ ಸಚಿವ ಕೃಷ್ಣಬೈರೇಗೌಡರು, ಹೆಚ್.ಕೆ.ಪಾಟೀಲ್, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ತಕರಾರು ವ್ಯಕ್ತಪಡಿಸಿ, ಪರವಾನಗಿ ಇದ್ದವರೇ ಈ ರೀತಿ ಮಾಡುತ್ತಿದ್ದಾರೆ ಎನ್ನುವ ವರದಿ ನಮ್ಮ ಗ್ರೌಂಡ್ ರಿಪೋರ್ಟ್‌ನಲ್ಲಿ ಬಂದಿದೆ. ಆದ- ್ದರಿಂದ ಬಡ ಜನರ ಹಿತಕಾಯಲು ನಿಯಮ ಉಲ್ಲಂಘಿ- ಸುವ ಕಂಪನಿ ಎಂಡಿಗಳ ವಿರುದ್ಧ ಕ್ರಮ ಕೈಗೊಳ್ಳುವುದು ಅನಿವಾರ್ಯವಾಗುತ್ತದೆ ಎಂದು ಸಚಿವರು ಸಭೆಯಲ್ಲಿ ಎಚ್ಚರಿಸಿದರು.

ಮಹಿಳೆಯರ, ವೃದ್ಧರ ಮೇಲೆ ದಬ್ಬಾಳಿಕೆ ನಡೆಸಿರುವ ಪತ್ರಿಕಾ ವರದಿಗಳೂ ನಿತ್ಯ ಬರುತ್ತಿವೆ. ನಾನು ಇದನ್ನೆಲ್ಲಾ ಸಹಿಸುವುದಿಲ್ಲ. ಜನರ ರಕ್ಷಣೆಗೆ ಕಠಿಣ ಕ್ರಮ ಕೈಗೊಳ್ಳುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಭೆಯಲ್ಲೇ ಕಠಿಣ ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್, ಗೃಹ ಸಚಿವ ಜಿ.ಪರಮೇಶ್ವರ್, ಕಾನೂನು ಸಚಿವ ಹೆಚ್.ಕೆ.ಪಾಟೀಲ್, ಕಂದಾಯ ಸಚಿವ ಕೃಷ್ಣಬೈರೇಗೌಡ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಎಸಿಎಸ್ ಅತೀಕ್ ಅಹಮದ್, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್ ಸೇರಿ ಗೃಹ ಇಲಾಖೆ, ಒಳಾಡಳಿತ, ಕಂದಾಯ ಮತ್ತು ಗುಪ್ತಚರ ಇಲಾಖೆಗಳ ಹಿರಿಯ ಅಧಿಕಾ- ರಿಗಳು ಭಾಗಿಯಾಗಿದ್ದರು.

**ನಿರ್ಮಲಾ ಸೀತಾರಾಮನ್‌ಗೆ ಡಿಕೆ ಶಿವಕುಮಾರ್ ಪತ್ರ**

## ಕೇಂದ್ರ ಬಜೆಟ್‌ನಲ್ಲಿ ಬೆಂಗಳೂರಿಗೆ ಆದ್ಯತೆ ನೀಡಿ: ಡಿಕೆ ಶಿವಕುಮಾರ



ಬೆಂಗಳೂರು: ಬರುವ ಫೆಬ್ರವರಿ 1 ರಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಸಕ್ತ ಸಾಲಿನ ಕೇಂದ್ರ ಬಜೆಟ್ ಮಂಡಿಸಲಿದ್ದಾರೆ. ಹೀಗಾಗಿ ಇದಕ್ಕೂ ಮುಂಚೆ ಕೇಂದ್ರ ಬಜೆಟ್‌ನಲ್ಲಿ ಬೆಂಗಳೂರಿಗೆ ಹೆಚ್ಚಿನ ಅನುದಾನ ನೀಡುವಂತೆ ಸಚಿವೆ ನಿರ್ಮಲಾ ಸೀತಾರಾಮನ್‌ಗೆ ಡಿಸಿಎಂ ಡಿಕೆ ಶಿವಕುಮಾರ್ ಪತ್ರ ಬರೆದಿದ್ದಾರೆ. ಬೆಂಗಳೂರು ಉತ್ತರ- ದಕ್ಷಿಣ ಕಾರಿಡಾರ್‌ಗೆ 15 ಸಾವಿರ ಕೋಟಿ ರೂ. ಪೂರ್ವದಿಂದ ಪಶ್ಚಿಮ ಕಾರಿಡಾರ್‌ಗೆ 25 ಸಾವಿರ ಕೋಟಿ ರೂ. ರಿಂಗ್ ರಸ್ತೆ ಮೇಲ್ದರ್ಜೆಗೆ 8,916 ಕೋಟಿ ರೂ. ಗಳ ಅಗತ್ಯ ಇದೆ. ಬೆಂಗಳೂರಿನ ಪ್ರಮುಖ 17 ಫ್ಲೈ ಓವರ್‌ಗೆ 12 ಸಾವಿರ ಕೋಟಿ ರೂ ಅಗತ್ಯವಿದೆ ಎಂದು ಉಲ್ಲೇಖಿಸಿದ್ದಾರೆ. ರಾಜ ಕಾಲುವೆ ನಿರ್ಹಣೆ, ವಿಸ್ತರಣೆಗೆ 3 ಸಾವಿರ ಕೋಟಿ ರೂ. ಅಗತ್ಯ ಇದೆ. ಬೆಂಗಳೂರಿನಲ್ಲಿ ಸದ್ಯ ಒಂದುವರೆ ಕೋಟಿ ಜನಸಂಖ್ಯೆ ಇದೆ. ಬಿಸಿನೆಸ್ ಕಾರಿಡಾರ್‌ಗೆ 27 ಸಾವಿರ ಕೋಟಿ ಅನುದಾನ ಅಗತ್ಯವಿದೆ. ಹೀಗಾಗಿ ಈ ಬಾರಿಯ ಬಜೆಟ್‌ನಲ್ಲಿ ಬೆಂಗಳೂರಿಗೆ ಆದ್ಯತೆ ನೀಡಿ ಎಂದು ಪತ್ರ ಬರೆದಿದ್ದಾರೆ.

ಇನ್ನು ಇತ್ತೀಚೆಗೆ ಕೇಂದ್ರ ಸರ್ಕಾರ ರಾಜ್ಯಗಳ ಪಾಲಿನ ತೆ- ರಿಗೆ ಹಣವನ್ನ ಹಂಚಿಕೆ ಮಾಡಿತ್ತು. ಕೇಂದ್ರ ಹಣಕಾಸು ಆಯೋಗದ ಶಿಫಾರಸ್ಸಿನ ಅನುಗುಣವಾಗಿ ರಾಜ್ಯಗಳಿಗೆ ಒಟ್ಟು 1 ಲಕ್ಷ 73 ಸಾವಿರ ಕೋಟಿ ರೂಪಾಯಿ ತೆರಿಗೆ ಹಣ ಹಂಚಿದೆ. ದೇಶದಲ್ಲಿ ಅತೀ ಹೆಚ್ಚು ಹೆಚ್ಚು ತೆರಿಗೆ ಕಟ್ಟುತ್ತಿರುವುದು ಕರ್ನಾಟಕ. ಆದರೆ ರಾಜ್ಯಕ್ಕೆ ತೆರಿಗೆ ಹಂಚಿಕೆಯಲ್ಲಿ ಅನ್ಯಾಯ ಆಗಿದೆ ಎಂದು ಕಾಂಗ್ರೆಸ್ ನಾಯಕರು ಆರೋಪಿಸುತ್ತಾ ಬರುತ್ತಿದ್ದಾರೆ. ನಮ್ಮ ತೆರಿಗೆ ನಮ್ಮ ಹಕ್ಕು. ಬಿಜೆಪಿಯ ಇಷ್ಟೊಂದು ಸಂಸದರಿದರೂ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯ ನೋಡುತ್ತಾ ಏಕೆ ಮೌನವಾಗಿದ್ದಾರೆ ಅಂತಾ ಡಿಸಿಎಂ ಡಿ.ಕೆ.ಶಿವಕುಮಾರ್ ಆಕ್ರೋಶ ಹೊರ ಹಾಕಿದ್ದರು.

## ಶ್ರೀರಾಮುಲು ಕಾಂಗ್ರೆಸ್ ಸೇರುವ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ : ಸಚಿವ ಸತೀಶ್ ಜಾರಕಿಹೊಳಿ

ಚಿಕ್ಕೋಡಿ (ಬೆಳಗಾವಿ) : ಬಿ ಶ್ರೀರಾಮುಲು ಕಾಂಗ್ರೆಸ್ ಸೇರುವ ಕುರಿತು ನನಗೆ ಯಾವುದೇ ರೀತಿಯ ಮಾಹಿತಿ ಇಲ್ಲ. ಡಿಸಿಎಂ ಡಿ. ಕೆ ಶಿವಕುಮಾರ್ ಶ್ರೀರಾಮುಲು ಕರೆತರುವ ಬಗ್ಗೆಯೂ ನನಗೆ ಗೊತ್ತಿಲ್ಲ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.

ಬೆಳಗಾವಿ ಜಿಲ್ಲೆಯ ಹುಕ್ಕೇರಿ ಪಟ್ಟಣದಲ್ಲಿ ಮಾಧ್ಯಮದರೊಂದಿಗೆ ಮಾತನಾಡಿದ ಅವರು, ನಾನು, ರಾಜಣ್ಣ ಸೇರಿದಂತೆ ಎಲ್ಲರೂ ಹೇಳಿದ್ದೇವೆ. ಮೊದಲಿನಿಂದಲೂ ಹೇಳುತ್ತಲೇ ಇದ್ದೇವೆ. ಶ್ರೀರಾಮುಲು ಆದಿಯಾಗಿ ನಮ್ಮ ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತ ಒಪ್ಪಿ ಬರುವವರಿಗೆ ಸ್ವಾಗತಿಸುತ್ತೇವೆ. ಇದೇ ಮಾತನ್ನು ಈಗಲೂ ಹಾಗೆ ನಾಳೆಯೂ ಹೇಳುತ್ತೇವೆ ಎಂದರು.

ನೋಟಿಸ್ ಕೊಡ್ತಾರೆ : ರಾಮುಲು ಕಾಂಗ್ರೆಸ್



ಸೇರುವುದಕ್ಕೆ ನಾನು ವಿರೋಧಿಸಿಲ್ಲ. ಈ ಕು- ರಿತು ನಾನು ಯಾವುದೇ ಹೇಳಿಕೆ ನೀಡಿಲ್ಲ. ನಾನು ಯಾವುದೇ ಹೇಳಿಕೆ ನೀಡಿದರೂ ಸಹ ಹೈಕಮಾಂಡ್ ನವರು ನೋಟಿಸ್ ನೀಡುತ್ತಾರೆ. ಇವೆಲ್ಲ ಊಹಾಪೋಹಗಳು. ಇದರ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ನಾವು ಕರೆದರೆ ಯಾರೂ ಪಕ್ಷಕ್ಕೆ ಬರುವುದಿಲ್ಲ. ಬರುವವರು ಅವರಾಗಿಯೇ ಸ್ವಇಚ್ಛೆಯಿಂದ ಬರುತ್ತಾರೆ ಎಂದು ಹೇಳಿದರು.

ನನ್ನ ನಿಲುವಿನಲ್ಲಿ ಬದಲಾವಣೆ ಇಲ್ಲ: 2028ಕ್ಕೆ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ತರುವುದು ಎಲ್ಲರ ಜವಾಬ್ದಾರಿ. ಅದರಂತೆಯೇ ಮುಖ್ಯಮಂತ್ರಿ ಹುದ್ದೆಯ ಬಗ್ಗೆ ಆಸಕ್ತಿ ತೋರಿಸುವುದೂ ಕೂಡ ಎಲ್ಲರ ಹಕ್ಕಾಗಿದೆ. ಸಿಎಂ ಹುದ್ದೆಯ ವಿಚಾರದಲ್ಲಿ ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ನಾನು ಸಿಎಂ ಆಗುತ್ತೇನೆ ಎಂದು ಹೇಳಿಲ್ಲ. ಬದಲಿಗೆ ಎಲ್ಲರೊಂದಿಗೆ ಹಕ್ಕು ಮಂಡಿಸುತ್ತೇನೆ ಎಂದಿದ್ದೇನೆ ಎಂದು ಸ್ಪಷ್ಟಪಡಿಸಿದ್ದಾರೆ.

ಮುಖ್ಯಮಂತ್ರಿ ಮಾಡೋದು ಅಥವಾ ಬಿಡೋದು ಅದು ಹೈಕಮಾಂಡ್?ಗೆ ಬಿಟ್ಟ ವಿಚಾರ. ಸರ್ಕಾರವನ್ನು ತರುವಲ್ಲಿ ಎಲ್ಲರ ಪಾತ್ರ ಇದ್ದೇ ಇರುತ್ತದೆ. ಅದರಲ್ಲಿ ನಾನೂ ಕೂಡ ಒಬ್ಬ ಭಾಗಿದಾರನಾಗಿದ್ದೇನೆ ಎಂದು ಹೇಳಿದರು.

ಡಿಕೆಶಿ ನಾನು ಒಗ್ಗಟ್ಟಿನಿಂದ ಇದ್ದೇವೆ : ಡಿ.ಕೆ ಶಿವಕುಮಾರ್ ಹಾಗೂ ನನ್ನ ನಡುವೆ ಯಾವುದೇ ಮುನಿಸಿಲ್ಲ. ಮೊನ್ನೆ ತಾನೇ ಗಾಂಧಿ ಭಾರತ ಕಾರ್ಯಕ್ರಮ ಜೊತೆಯಾಗಿಯೇ ಯಶಸ್ವಿ ಮಾಡಿದ್ದೇವೆ. ನಾವೆಲ್ಲ ಒಗ್ಗಟ್ಟಾಗಿ ಒಂದೇ ಕಡೆ ಇದ್ದೇವೆ. ಇದರಲ್ಲಿ ಯಾವುದೇ ವೈಮನಸ್ಸಿನ ಪ್ರಶ್ನೆಯೇ ಬರುವುದಿಲ್ಲ ಎಂದು ತಿಳಿಸಿದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯ ಬಗ್ಗೆ ಹೇಳಿಕೆ ನೀಡಲು ನಾನು ಸೂಕ್ತ ವ್ಯಕ್ತಿಯಲ್ಲ. ನಮ್ಮ ಕಡೆ ಆ ಅಧಿಕಾರನೂ ಇಲ್ಲ. ಅದು ದೆಹಲಿ ನಾಯಕರಿಗೆ ಗೊತ್ತಿರುವ ವಿಚಾರ ಎಂದು ಹೇಳಿದರು.

**15ನೇ ರಾಷ್ಟ್ರೀಯ ಮತದಾರರ ದಿನಾಚರಣೆ**

## ಸಧೃಡ ರಾಷ್ಟ್ರ ನಿರ್ಮಾಣಕ್ಕಾಗಿ ಮತದಾನದ ಹಕ್ಕು ಚಲಾಯಿಸಿ: ಇನವಳ್ಳಿ ಕರೆ



ಬೆಳಗಾವಿ, : "ಭಾರತ ಬಹು ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಸಧೃಡ ರಾಷ್ಟ್ರ ನಿರ್ಮಾಣದಲ್ಲಿ ಯುವ ಜನತೆಯ ಪಾತ್ರ ಬಹು ಮುಖ್ಯವಾಗಿದ್ದು, ಮತದಾನದ ಸಂದರ್ಭದಲ್ಲಿ ಯಾವುದೇ ಆಸೆ, ಆಮಿಷಕ್ಕೊಳಗಾಗದೇ, ಜಾತಿ-ಮತ ಮರೆತು ತಮ್ಮ ಮತದಾನದ ಹಕ್ಕನ್ನು ಚಲಾಯಿಸುವುದು ಎಲ್ಲರ ಕರ್ತವ್ಯವಾಗಿದೆ" ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾದೀಶರಾದ ಟಿ.ಎನ್.ಇನವಳ್ಳಿ ಅವರು ನುಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಮಹಾನಗರ ಪಾಲಿಕೆ ಆಶ್ರಯದಲ್ಲಿ ಕುಮಾರ ಗಂಧರ್ವ ರಂಗಮಂದಿರದಲ್ಲಿ ಶನಿವಾರ (ಜ.25) ಜರುಗಿದ 15ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಮತದಾನ ಎನ್ನುವದು ಸಂವಿಧಾನಾತ್ಮಕಾಗಿ ಪಡೆದಂತಹ ಅತ್ಯಮೂಲ್ಯ ಹಕ್ಕಾಗಿದೆ. ಸಂವಿಧಾನ ನೀಡಿದಂತಹ ಅತ್ಯಮೂಲ್ಯವಾದ ಹಕ್ಕನ್ನು ತಪ್ಪದೇ ಚಲಾಯಿಸುವುದು ಅರ್ಹ ಭಾರತೀಯ ಪ್ರಜೆಗಳ ಕರ್ತವ್ಯವಾಗಿದೆ ಎಂದರು.

ಮತದಾನದ ಸಂದರ್ಭದಲ್ಲಿ ಉತ್ತಮ ಆಡಳಿತ ನೀಡುವಂತಹ ವ್ಯಕ್ತಿಯನ್ನು ಆರಿಸುವುದು ಮತದಾರರ ಕೈಯಲ್ಲಿದೆ. ಮತದಾನದ ಸಂದರ್ಭದಲ್ಲಿ ಪ್ರಾಮಾಣಿಕವಾಗಿ ಮತಚಲಾಯಿಸುವದು ಮತದಾರರ ಕರ್ತವ್ಯವಾಗಿದೆ.

18 ವರ್ಷ ಮೇಲ್ಪಟ್ಟವರೆಲ್ಲರೂ ಮತದಾರರ ಪಟ್ಟಿಯಲ್ಲಿ ತಮ್ಮಹೆಸರನ್ನು ನೊಂದಾಯಿಸಿಕೊಂಡು ಕಡ್ಡಾಯವಾಗಿ ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದರ ಜೊತೆಗೆ ಇತರರನ್ನು ಮತದಾನಕ್ಕೆ ಪ್ರೇರೆಪಿಸುವಂತೆ ನ್ಯಾಯಾದೀಶರಾದ ಟಿ.ಎನ್.ಇನವಳ್ಳಿ ಅವರು ಕರೆ ನೀಡಿದರು .

ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಮಾತನಾಡಿ, ಮತದಾನ ಎಂಬುದು ಮೂಲಭೂತ ಹಕ್ಕಿನ ಜೊತೆಗೆ ಅದೊಂದು ಬಹುದೊಡ್ಡ ಜವಾಬ್ದಾರಿಯಾಗಿದೆ. ನಮ್ಮ ಕ್ಷೇತ್ರ ಅಭಿವೃದ್ಧಿ ಹಾಗೂ ನಮಗೋಸ್ಕರ ಕಾರ್ಯ ನಿರ್ವಹಿಸುವಂತಹ ಸಮಥ- ರ್ರನ್ನು ಆಯ್ಕೆ ಮಾಡುವುದು ಮತದಾನದ ಶಕ್ತಿಯಾಗಿದೆ ಎಂದರು.

ಯುವಶಕ್ತಿ ಎನ್ನುವುದು ಅತೀ ಶಕ್ತಿಶಾಲಿಯಾಗಿದೆ ಇದು ದೇಶದ ಭವಿಷ್ಯವನ್ನು ನಿರ್ಮಿಸುತ್ತದೆ. ಈ ಯುವ ಶಕ್ತಿಯನ್ನು ಉತ್ತಮ ದಾರಿಯಲ್ಲಿ ನಡೆಸಿದರೆ ರಾಷ್ಟ್ರವನ್ನು ಸಧೃಡ ರಾಷ್ಟ್ರವನ್ನಾಗಿಸಬಹುದು.

**ಶಾಯರಿ ಮೂಲಕ ಮತದಾನದ ಮಹತ್ವ ಸಾರಿದ ಜಿಲ್ಲಾಧಿಕಾರಿ**

ವೋಟ ತುಮ್ಹಾರಾ ಶಕ್ತಿ ಬಡಿ, ಇಸೆ ನಾ ವ್ಯರ್ಥ ಗವಾನಾ ದೇಶಕಿ ತಕದೀರ ಹೈ ಇಸಮೇ, ಅಪನೇ ತಕದಿರ ಬದಲನಾ ಏಕ ಏಕ ವೋಟ ಸೇ ಬನತಿ ಬದಲಾವಕಿ ತಸವಿರ, ಸೋಚ ಸಮಜಕರ ಚುನೋ ನೇತಾ ಯೇ ಹೈ ಲೋಕ ತಂತ್ರಕಿ" ಎಂಬ ಶಾಯರಿ ಹೇಳುವ ಮೂಲಕ ಮತದಾನದ ಮಹತ್ವವನ್ನು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಸಾರಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ, ಮಹಾನಗರ ಪಾಲಿಕೆ ಆಯುಕ್ತೆ ಶುಭಾ ಬಿ, ಹಿರಿಯ ಅಧಿಕಾರಿ ಗೀತಾ ಕೌಲಗಿ, ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರಾದ ರವಿ ಬಂಗಾರಪ್ಪನವರ, ಮಹಾನಗರ ಪಾಲಿಕೆ ಉಪ ಆಯುಕ್ತರುಗಳಾದ ಉದಯಕುಮಾರ ತಳವಾರ, ರೇಷ್ಮಾ ತಾಳಿಕೋಟಿ, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕಾಂಬಳೆ ಸೇ- ರಿದಂತೆ ವಿವಿಧ ಇಲಾಖೆ ಅಧಿಕಾರಿ, ಸಿಬ್ಬಂದಿಗಳು, ಕಾಲೇಜು ವಿಧ್ಯಾರ್ಥಿಗಳು ಉಪಸ್ಥಿತರಿದ್ದರು. ತ ಇದೇ ಸಂದರ್ಭದಲ್ಲಿ ಯುವ ಮತದಾರರಿಗೆ ಮತದಾನ ಗುರುತಿನ ಚೀಟಿಗಳನ್ನು ವಿತರಿಸಲಾಯಿತು. ಮತದಾರರ ನೊಂದಣಿ ಕಾರ್ಯಗಳನ್ನು ಉತ್ತಮವಾಗಿ ಕಾರ್ಯ ನಿರ್ವಹಿಸಿದ ಬಿ.ಎಲ್.ಓ.ಗಳಿಗೆ ಹಾಗೂ ಶಾಲಾ ಕಾಲೇಜು ವಿಧ್ಯಾರ್ಥಿಗಳಿಗಾಗಿ ಆಯೋಜಿಸಲಾದ ವಿವಿಧ ಸ್ಪರ್ಧೆಗಳಲ್ಲಿ ವಿಜೇತ ವಿಧ್ಯಾರ್ಥಿಗಳಿಗೆ ಪ್ರಮಾಣಪತ್ರ ನೀಡಿ ಗೌರವಿಸಲಾಯಿತು.

ತದನಂತರ "ನಾ ಭಾರತ" ಎಂಬ ಕಿರು ಚಿತ್ರಪ್ರದರ್ಶನ ಹಾಗೂ ಮತದಾರ ದಿನ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಮತದಾರರ ದಿನಾಚರಣೆ-ಜಾಗೃತಿ ಜಾಥಾ: ರಾಷ್ಟ್ರೀಯ ಮತದಾರರ ದಿನಾಚರಣೆಯ ಪ್ರಯುಕ್ತ ಮತದಾರರ ಜಾಗೃತಿ ಜಾಥಾ ಕಾರ್ಯಕ್ರಮವು ಜಿಲ್ಲಾಧಿಕಾರಿಗಳ ಕಚೇರಿ ಆವರಣದಿಂದ ಪ್ರಾರಂಭವಾದ ಜಾಗೃತಿಜಾಥಾ ಚನ್ನಮ್ಮ ವೃತ್ತ, ಬಿಮ್ಸ ಆಸ್ಪತ್ರೆ ಮಾರ್ಗವಾಗಿ ಕುಮಾರ ಗಂಧರ್ವ ರಂಗಮಂದಿರ ಬಂದು ತಲುಪಿತು.

## ಹತ್ತು ಸಾವಿರ ಮುತ್ತೈದೆಯರಿಗೆ ಉಡಿ ತುಂಬಿದ ಮುಗಳಖೋಡ ಮಠ



ಮುಗಳಖೋಡ: ಶ್ರೀಮಠದಲ್ಲಿ ಉಡಿ ತುಂಬಿಕೊಂಡಿರುವ ತಾಯಂದಿರ ಮಾಂಗಲ್ಯ 100 ವರ್ಷ ಗಟ್ಟಿಯಾಗಿ ಉಳಿಯಲಿದೆ. ಶ್ರೀ ಯಲ್ಲಾಲಿಂಗ, ಶ್ರೀ ಸಿದ್ಧರಾಮರ ಆಶೀರ್ವಾದ ತಮ್ಮ ಕುಟುಂಬದ ಮೇಲೆ ಯಾವತ್ತೂ ಇರಲಿ ಎಂದು ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ಹೇಳಿದರು.

ಅವರು ಪಟ್ಟಣದ ಪವಾಡ ಪುರುಷ ಸದ್ಗುರು ಶ್ರೀ ಯಲ್ಲಾಲಿಂಗೇಶ್ವರ 39ನೇ ಪುಣ್ಯಾರಾಧನೆ ನಿಮಿತ್ಯ ಶ್ರೀಮಠದಲ್ಲಿ ದಾನಮ್ಮ ದೇವಿಯ ಪುರಾಣ ಹಮ್ಮಿಕೊಳ್ಳಲಾಗಿದೆ. ಇದೇ ವೇದಿಕೆಯಲ್ಲಿ ಸುಮಾರು 10,000 ತಾಯಂದಿರ ಹಣೆಗೆ ದಂಡಿ ಕಟ್ಟಿ ಉಡಿ ತುಂಬಿ ಉಡಿ ತುಂಬುವುದರ ಹಿನ್ನೆಲೆ ಹೇಳುತ್ತಾ ಆಶೀರ್ವಚನ ನೀಡಿದರು.



ಗುಡ್ಡಾಪುರ ಶ್ರೀ ದಾನಮ್ಮದೇವಿ ದೇವಸ್ಥಾನ ಟ್ರಸ್ಟ್ ಕಮೀಟಿ ಅಧ್ಯಕ್ಷ ವಿಜುಗೌಡ ಪಾಟೀಲ ಮಾತನಾಡಿ ಶ್ರೀಮಠದಿಂದ ತಮಗೆ ಆದ ಅನುಭವ ಮತ್ತು ಪವಾಡಗಳನ್ನು ಬಿಚ್ಚಿಟ್ಟರು.

ಅನೇಕ ಪ್ರವಚನಕಾರರು ಆಗಮಿಸಿ ಗುಡ್ಡಾಪುರ ದಾನಮ್ಮ ದೇವಿಯ ಕುರಿತು ಪ್ರವಚನ ನೀಡಿದರು.

ಭಕ್ತರಿಂದ ಶ್ರೀ ಮುರುಘರಾಜೇಂದ್ರ ಶ್ರೀಗಳಿಗೆ ನಾಣ್ಯದ ತುಲಾಭಾರ ನಡೆಯಿತು. ಕನ್ನಡದ ಖ್ಯಾತ ಗಾಯಕಿ ಶಿವೇನಿ ಅವರ ತಂಡ ಮತ್ತು ಶ್ರೀಮಠದ ಕಲಾಬಳಗದಿಂದ ಸಂಗೀತ ಸೇವೆ ಜರುಗಿತು.

ಶ್ರೀ ಮಠದ ಪರಮ ಭಕ್ತ, ನ್ಯಾಯವಾದಿ ಸೋಮು ಹೊರಟ್ಟಿ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

ಶ್ರೀಮಠದ ಹಿರಿಯರು, ಕಾರ್ಯಕರ್ತರು, ಅಪ್ಪಾಜಿ ಸೆಕ್ಯೂರಿಟಿ ಫೋರ್ಸ್ ಸೇರಿದಂತೆ ಸಾವಿರಾರು ಭಕ್ತ ಸಮೂಹದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ

ಗದಗ : ಜನೆವರಿ 23: ಗದಗ ಜಿಲ್ಲೆಯ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಮಕ್ಕಳಿಗೆ 2024–25 ನೇ ಸಾಲಿನ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಜನೆವರಿ 25 ರಂದು ಶನಿವಾರ ಬೆಳಿಗ್ಗೆ 10 ಗಂಟೆಗೆ ಲೋಯಲಾ ಪ್ರೌಢ ಶಾಲೆ, ಬೆಟಗೇರಿ–ಗದಗ ಇಲ್ಲಿ ಆಯೋಜಿಸಲಾಗಿದೆ. ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ ತಾಲೂಕಾ ಮಟ್ಟದಲ್ಲಿ ಜರುಗಿದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ವೈಯಕ್ತಿಕ ಹಾಗೂ ಗುಂಪು ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳು ಭಾಗವಹಿಸಬಹುದಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದು ೭೬ನೇ ಗಣರಾಜ್ಯೋತ್ಸವ ಕಾರ್ಯಕ್ರಮ

**ಕಾರವಾರ.** –ಜಿಲ್ಲಾಡಳಿತ ಉತ್ತರ ಕನ್ನಡದ ವತಿಯಿಂದ 76ನೇ ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮವು ಜನವರಿ 26 ರಂದು ಬೆಳಗ್ಗೆ 9 ಗಂಟೆಗೆ ಕಾರವಾರದ ಪೊಲೀಸ್ ಪರೇಡ್ ಮೈದಾನದಲ್ಲಿ ನಡೆಯಲಿದೆ.

ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್. ವೈದ್ಯ ಧ್ವಜಾರೋಹಣ ನೇರವೇರಿಸಿ, ಗಣ–ರಾಜ್ಯೋತ್ಸವ ಕಾರ್ಯಕ್ರಮದ ಸಂದೇಶ ನೀಡಲಿದ್ದಾರೆ.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ, ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಏಜೆನ್ಸಿ ಲಿಮಿಟೆಡ್ ಅಧ್ಯಕ್ಷ ಸತೀಶ್ ಕೆ. ಸೈಲ್, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರಾದ ಶಿವರಾಮ ಹೆಬ್ಬಾರ್, ದಿನಕರ ಕೆ. ಶೆಟ್ಟಿ, ಭೀಮಣ್ಣ ಟಿ. ನಾಯ್ಕ, ವಿಧಾನ ಪರಿಷತ್ ಸದಸ್ಯರಾದ ಎಸ್.ವಿ. ಸಂಕನೂರು, ಶಾಂತಾರಾಮ ಬುಡ್ನ ಸಿದ್ದಿ, ಗಣಪತಿ ಉಳ್ವೇಕರ ನಗರ ಸಭೆ ಅಧ್ಯಕ್ಷ ರವಿರಾಜ ಚಂದ್ರಹಾಸ ಅಕೋಲೆಕರ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

## ಮೊಬೈಲ್ ಕ್ಯಾಂಟೀನ್ ಖರಿದಿಸಲು: ಅರ್ಜಿ ಆಹ್ವಾನ

**ಕಾರವಾರ** – ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ಉದ್ಯಮಿದಾರರನ್ನು ಉತ್ತೇಜಿಸಲು ಕೌಶಲ್ಯಾಭಿವೃದ್ಧಿ Enterprenuership Programme ತರಬೇತಿ ಹಾಗೂ ಪ್ರವಾಸಿ ತಾಣಗಳಲ್ಲಿ ಸಹಾಯಧನದೊಂದಿಗೆ ಮೊಬೈಲ್ ಕ್ಯಾಂಟೀನ್ ಖರಿದಿಸಲು ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿ ಸೇರಿದ 170 ಅಭ್ಯರ್ಥಿಗಳಿಗೆ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ 105 ಅಭ್ಯರ್ಥಿಗಳಿಗೆ ವಸತಿಸಹಿತ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಅತಿಥ್ಯ ಕ್ಷೇತ್ರದ ಸಂಸ್ಥೆಗಳ ಮೂಲಕ ಕಾರ್ಯಕ್ರವನ್ನು ಜಾ–ರಿಗೊಳಿಸಲಾದೆ.

ಆಸಕ್ತ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಜ.31 ರೊಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08382–221172ನ್ನು ಸಂರ್ಪಕಿಸುವಂತೆ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪರಿಸರ ಉಳಿಸಿ- ಜೀವ ಸಂಕುಲ ರಕ್ಷಿಸಲು ಶ್ರೀಗಳ ಕರೆ



ಹೂಲಿಕಟ್ಟಿ : ನಿಸರ್ಗ ಇಕೋ ಕ್ಲಬ್ ಸರಕಾರಿ ಪ್ರೌಢ ಶಾಲೆ ಹೂಲಿಕಟ್ಟಿ ಸಹಯೋಗದಲ್ಲಿ ಸಮೀಪದ ಅಜ್ಜನ ಮಠದ ಪರಿಸರದಲ್ಲಿ ವನ ಸಂಚಾರ ಹಮ್ಮಿಕೊಳ್ಳಲಾಗಿತ್ತು ಶಾಲೆಯ ನಿಸರ್ಗ ಕ್ಲಬ್ 45ವಿದ್ಯಾರ್ಥಿ ಗಳು ವನ ವೀಕ್ಷಣೆ, ಕೆರೆ, ಕಟ್ಟೆ. ಜಲ ಸಂಗ್ರಹಣೆ ವಿವಿಧ ಸಸ್ಯವರ್ಗ ಮರ ಗಿಡಗಳ ಕುರಿತು ಅಧ್ಯಯನ ದಲ್ಲಿ ಪಾಲ್ಗೊಂಡಿದ್ದರು. ಅಜ್ಜನ ಮಠ ದ ಶ್ರೀ ಗಳು ಈ ಸಂದರ್ಭದಲ್ಲಿ ಪ್ರಕೃತಿ ಸೊಬಗು ಅದರ ಉಪ ಯುಕ್ತ ಅಂಶಗಳನ್ನು ಉಳಿಸಿ ಬೆಳಿದಲ್ಲಿ ಮುಂಬರುವ ದಿನಗಳಲ್ಲಿ ಜೀವ ಸಂಕುಲಕ್ಕೆ ಉಸಿರಾಡಲು ಆಮ್ಲ ಜನಕ ಹೇರಳವಾಗಿ ದೊರಕಲು ಇಂದಿನ ವಿದ್ಯಾರ್ಥಿ ಗಳು ಸಸ್ಯ ಬೆಳಿಸಿ ಸಂರಕ್ಷಣೆ ಮಾಡುವ ಹೊಣೆ ಗಾರಿಕೆ ತಮ್ಮೆಲ್ಲರಿಗೂ ಸೇರಿದೆ, ಜೊತೆಗೆ ತಮ್ಮ ಸುತ್ತಲಿನ ಪರಿಸರ ಸ್ವಚ್ಛತೆ ಕಾಳಜಿ ವಹಿಸಿದಲ್ಲಿ ಅರೋಗ್ಯ ಯುತ ಸಮಾಜ ನಿರ್ಮಾಣ ಮಾಡಲು ತಾವೆಲ್ಲರೂ ಕೈ ಜೋಡಿಸಲು ಕರೆ ನೀಡಿದರು.

ಈ ಸಂದರ್ಭದಲ್ಲಿ ವನ ಭೋಜನ, ವಿವಿಧ ಮೋಜಿನ ಆಟಗಳು ಪ್ರಕೃತಿ ಕು–ರಿತು ಚಿತ್ರ ಬಿಡಿಸುವ ಹಾಡು ಹೇಳುವ ಚಟುವಟಿಕೆಗಳಲ್ಲಿ ಮಕ್ಕಳು ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಮಕ್ಕಳಿಂದ ಗ್ರಾಮ ಸಭೆ ಏರ್ಪಡಿಸಿ ಪರಿಸರ ಹೊಣೆಗಾರಿಕೆ ಕುರಿತು ಚರ್ಚಿಲಾಯಿತು.

ಡಾ ಶೇಖರ ಹಲಸಗಿ, ಬಿಎಸ್ ಪಾಟೀಲ, ಇಕೋ ಕ್ಲ ಬ್ ಸಂಚಾಲಕರಾದ ಶ್ರೀಮತಿ ಕಾಂಚನ ಕದ್ದು ಉಪಸ್ಥಿತರಿದ್ದರು ಮುಖ್ಯೊಪಾಧ್ಯರಾದ ಜಿ ಎಚ್ ನಾಯ್ಕ ರವರ ಮಾರ್ಗ ದರ್ಶನದಲ್ಲಿ ಯಶಸ್ವಿಯಾಗಿ ಜರುಗಿತು.

## ಫೆಬ್ರವರಿ ಮಾಹೆಯ ಜಯಂತಿಗಳ ಆಚರಣೆಗೆ ಸಕಲ ಸಿದ್ದತೆ ಮಾಡಿಕೊಳ್ಳಿ: ಅಪರ ಜಿಲ್ಲಾಧಿಕಾರಿ

**ಕಾರವಾರ,** :–ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಎಲ್ಲಾ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸುತ್ತಿದ್ದು, ಅದೇ ರೀತಿಯಲ್ಲಿ ಫೆಬ್ರವರಿ ಮಾಹೆಯಲ್ಲಿ ನಡೆಯುವ ಛತ್ರಪತಿ ಶಿವಾಜಿ ಜಯಂತಿ ಸೇ–ರಿದಂತೆ ವಿವಿಧ ಜಯಂತಿಗಳನ್ನು ಅಥ–ರ್ಪೂರ್ಣವಾಗಿ ಆಚರಿಸಲು ಸಲಕ ಸಿದ್ದತೆ ಮಾಡಿಕೊಳ್ಳಿ ಎಂದು ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ ಹೇಳಿದರು.

ಅವರು ಗುರುವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಫೆಬ್ರವರಿ ಮಾಹೆಯಲ್ಲಿ ನಡೆಯುವ ಛತ್ರಪತಿ ಶಿವಾಜಿ ಜಯಂತಿ ಸೇರಿದಂತೆ ವಿವಿಧ ಜಯಂತಿಗಳ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಫೆ. 1 ರಂದು ಮಡಿವಾಳ ಮಾಚಿದೇವ ಜಯಂತಿ, ಫೆ. 5 ರಂದು ಸವಿತಾ ಮಹರ್ಷಿ ಜಯಂತಿ, ಫೆ,10 ರಂದು ಕಾಯಕ ಶರಣರ ಜಯಂತಿ, ಫೆ. 15 ರಂದು ಶ್ರೀ ಸಂತ ಸೇವಾಲಾಲ್ ಜಯಂತಿ ಹಾಗೂ ಫೆ.20 ರಂದು ಶ್ರೀ ಸಂತ ಕವಿ ಸರ್ವಜ್ಞ ಜಯಂತಿಯನ್ನು ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ನಿಗದಿತ



ದಿನಾಂಕದಂದು ಬೆಳಗ್ಗೆ 10.30 ಗಂಟೆಗೆ ಆಚರಿಸಲು ತಿರ್ಮಾನಿಸಲಾಯಿತು.

ಛತ್ರಪತಿ ಶಿವಾಜಿ ಜಯಂತಿಯನ್ನು ಸಮುದಾಯದ ಕೋರಿಕೆಯ ಪ್ರಕಾರ ಫೆ.19 ರಂದು ಬೆಳಗ್ಗೆ 10.30 ಗಂಟೆಗೆ ಕಾರವಾರ ನಗರ ಸಭೆಯ ಉದ್ಯಾವನದಲ್ಲಿ ವಿಜೃಂಭನೆಯಿಂದ ಆಚರಿಸಲು ನಿರ್ಧಾ–ರಿಸಲಾಯಿತು. ಮಹಾನ್ ದಾರ್ಶನಿಕರು ಕೇವಲ ಒಂದು ಜಾತಿ ಹಾಗೂ ಧರ್ಮಕ್ಕೆ ಸೀಮಿತವಾಗದೆ ಸಮಾಜದ ಒಳತಿಗಾಗಿ ತಮ್ಮ ಜೀವನವನ್ನೇ ತ್ಯಜಿಸಿದವರನ್ನು ಸರ್ಕಾರ ಗುರುತಿಸಿ ಜಯಂತಿಗಳನ್ನು ಆಚರಿಸಲಾಗಿದ್ದು, ಅವರ ವಿಚಾರ ಧಾರೆಗಳು, ವಚನ ಸಾಹಿತ್ಯಗಳ, ಸಾಧನೆ, ಆದರ್ಶಗಳನ್ನು ಅರಿತುಕೊಂಡು ಅವರ ಹಾಕಿಕೊಟ್ಟ ಮಾರ್ಗಗಳನ್ನು ಅನುಸ–ರಿಸುವ ಉದ್ದೇಶದಿಂದ ಜಯಂತಿ ಆಚ–ರಿಸುತ್ತಿಲಾಗುತ್ತಿದೆ ಈ ಎಲ್ಲಾ ಜಯಂತಿಗಳ ಸದುಪಯೋಗ ಪಡೆದುಕೊಳ್ಳುವಂತೆ ಹಾಗೂ ಎಲ್ಲಾ ಜಯಂತಿಗಳನ್ನು ಎಲ್ಲಾ ಸಮುದಾಯವರು ಒಟ್ಟುಗೂಡಿ ಜಯಂತಿಗಳನ್ನು ಆಚರಿಸಬೇಕು ಎಂದರು.

ನಿಯಮನುಸಾರ ಆಮಂತ್ರಣ ಪತ್ರಿಕೆಯನ್ನು ಪ್ರಕಟಿಸುವಂತೆ ಹಾಗೂ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸವನ್ನು ಏರ್ಪಡಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಸೂಚಿಸಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಮಂಗಲಾ ಎಂ ನಾಯ್ಕ, ವಿವಿಧ ಇಲಾಖೆಯ ಅಧಿಕಾರಗಳು, ಎಲ್ಲಾ ಸಮುದಾಯದ ಮುಂಖಡರುಗಳು ಇತರರು ಉಪಸ್ಥಿತರಿದ್ದರು.

## ಮಕ್ಕಳ ಅಭಿರುಚಿಗೆ ತಕ್ಕಂತೆ ಶಿಕ್ಷಣ ನೀಡಿದಲ್ಲಿ ಅವರ ಭವಿಷ್ಯ ಉಜ್ವಲ

ಇಂಡಿ: ಪ್ರತಿಯೊಬ್ಬ ಪಾಲಕರು ನಿಮ್ಮ ಅಭಿಲಾಷೆಗೆ ತಕ್ಕಂತೆ ಶಿಕ್ಷಣದ ಹೊರೆ ಹೇರಬೇಡಿ. ಮಕ್ಕಳ ಅಭಿರುಚಿಗೆ ತಕ್ಕಂತೆ ಶಿಕ್ಷಣ ನೀಡಿದಲ್ಲಿ ಅವರ ಭವಿಷ್ಯ ಉಜ್ವಲವಾಗುವುದರಲ್ಲಿ ಎರಡು ಮಾತಿಲ್ಲ ಎಂದು ವಿಧಾನಸಭೆಯ ಅಂದಾಜು ಸ್ಥಾಯಿ ಸಮಿತಿ ಅಧ್ಯಕ್ಷ ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ಅವರು ಪಟ್ಟಣದ ಸಿಂದಗಿ ರಸ್ತೆಯ ಶ್ರೀ ಸಾಯಿಪಬ್ಲಿಕ್ ಆಂಗ್ಲ ಮಾಧ್ಯಮ್ ಶಾಲೆಯ 15ನೇ ವಾರ್ಷಿಕ ಸ್ನೇಹ ಸಮ್ಮೆಳನ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ನಮ್ಮ ಪೂರ್ವಾಜರು ಕನ್ನಡ ಏಕಿಕರಣದ ಜೊತೆಗೆ ಕನ್ನಡ ಭಾಷೆ ನಾಡು ಉಳಿಸಿ ಬೇಳೆಸುವ ಮೂಲಕ ರಾಷ್ಟ್ರದಲ್ಲಿ ಕನ್ನಡದ ಹಿರಿಮೆಯನ್ನು ಬೇಳಗಿಸಿದ್ದಾರೆ. ಈ ನಾಡು ಸಾಹಿತಿಗೆ, ಶಾಂತಿಗೆ ಪ್ರಿತಿಗೆ ಹೇಸರುವಾಸಿಯಾಗಿ ರಾಜ್ಯಕ್ಕೆ ಒಂದು ಭವ್ಯ ಪರಂಪರೆಯನ್ನು ಹಾಕಿಕೊಟ್ಟಿದ್ದಾರೆ ಎಂದರು.

ನಮ್ಮ ಭಾಗದ ಶಿಕ್ಷಣ ಸಂಸ್ಥೆಗಳು ಕೂಡಾ ಎಲ್ಲ ವಿಧದಲ್ಲಿ ಬೆಳವಣಿಗೆಯಾಗಬೇಕು. ಅಲ್ಲದೆ ಇಂದು ಸ್ಪರ್ಧಾತ್ಮಕ ಯುಗವಾಗಿದ್ದ–ರಿಂದ ಇಂಗ್ಲಿಷ ಬಾಷೆಯ ಪಾಂಡಿತ್ಯ ಮುಖ್ಯವಾಗಿದ್ದು ಕನ್ನಡ ಭಾಷೆಯನ್ನು ಭ್ಾಎ ಮೇಲೆ ಅಭಿಮಾನ ಇರಬೇಕು ಎಂದರು. ಅನೇಖ ಶೀರ್ಖ್ಣಣ ಸಂಸ್ತೆಗಳು ಅಮಕ್ಕಳಪ್ರಗತಿಗೆ ಪೂರಕವಾಘೀ ೦ರ್ಖಖಳಭವಷ್ಯ ಇಂಡಿ ನಾಡು ಆಘಭೇಕು ಇಂಡಿ ತನ್ನದೆಯದ ಸಾಧನೆ ಮಾಡುತಿದೆ ಅನೇಕ ರಂಗಗಳಲ್ಲಿ ಸಾಧನೆ ಮಾಡಿದ್ದಾರೆ.ಪ್ರಿ ಹೃದಯ ಶ್ರೀಮಂತಿಕೆ ನಮ್ಮಲದಿ–ಎದೆ ಶೃಗಳು ನಮ್ಮಗೆ ಒಳ್ಳೆಯ ಸಂಸ್ಕಾರ ನೀಡಿದ್ದಾಖುಏ ಆಔಖು ಧಾರಿಯಲಿ ಸಾಗೊಣ ಎಂದರು. ನಿಮ್ಮ ಅಭಿಲಾಷೆ ತಕ್ಕಂತೆ ಶಿಕ್ಷಣ ಹರಬೇಡಿ ಅವರ ಮಕ್ಕಳ ಪ್ರತಬೇಗಣುವಾಘೀ ಶಿಕ್ಷಣ ನೀಡಿ ಎಂದರು. ಸಾಧನೆ ಮಾಡುವುದು ಸುಲಭ ಅದಬನ್ನು ಉಳಿಸಿಬೆಳಸಿಕೊಂಡು ಹೊಗುವುದು ಬಹಳ ಮುಕ್ಯ ಆನಿಟ್ಟಿನಲ್ಲಿ ಸಾಗಿ ಎಂದರು.

## ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಸರಕಾರಿ ಶಾಲೆಗಳಲ್ಲಿ ಶೇ.100 ಫಲಿತಾಂಶ ಬರಬೇಕು: ಜಿಲ್ಲಾಧಿಕಾರಿ

**ಕಾರವಾರ,** ಈ ಬಾರಿಯ ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಜಿಲ್ಲೆಯ ಎಲ್ಲಾ ಸರಕಾರಿ ಶಾಲೆಗಳಲ್ಲಿ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ.100 ಫಲಿತಾಂಶ ದಾಖಲಿಸುವುದರ ಜೊತೆಗೆ ಜಿಲ್ಲೆಯ ಯಾವುದೇ ವಿದ್ಯಾರ್ಥಿ ಅನುತ್ತೀರ್ಣರಾಗದಂತೆ ಸಂಬಂದಪಟ್ಟ ಶಾಲೆಗಳ ಮುಖ್ಯೋಪಾಧ್ಯಾಯರು, ಶಿಕ್ಷಕರು ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳು ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಸೂಚಿಸಿದರು.

ಅವರು ಗುರುವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಕಾರವಾರ ಶೈಕ್ಷಣಿಕ ಜಿಲ್ಲೆಯಲ್ಲಿ ಈ ಬಾರಿಯ ಎಸ್.ಎಸ್.ಎಲ್.ಸಿ ಫಲಿತಾಂಶ ವೃದ್ಧಿಗೆ ಕೈಗೊಂಡಿರುವ ಕ್ರಮಗಳ ಕುರಿತು ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು, ತಾಲೂಕು ಶಿಕ್ಷಣಾಧಿಕಾರಿಗಳು ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಎಸ್.ಎಸ್.ಎಲ್.ಸಿ ಯಲ್ಲಿ ಉತ್ತೀರ್ಣರಾದರೆ ವಿದ್ಯಾರ್ಥಿಗಳು ತಮ್ಮ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುತ್ತಾರೆ, ವಿದ್ಯಾರ್ಥಿಗಳನ್ನು ಉತ್ತೀರ್ಣರಾಗುವಂತೆ ಸಿದ್ದಗೊಳಿಸುವ ಜವಾಬ್ದಾರಿ ಶಿಕ್ಷಕರದ್ದು, ಪ್ರತಿಯೊಬ್ಬ ವಿದ್ಯಾರ್ಥಿಯು ದೇಶದ ಭವಿಷ್ಯವಾಗಿದ್ದು, ಅವರ ಜೀವನವನ್ನು ರೂಪಿಸುವ ಅತೀ ದೊಡ್ಡ ಜವಾಬ್ದಾರಿ ಹೊಂದಿರುವ ಶಿಕ್ಷಕರು, ತಮ್ಮ ಸಕಲ ಅನುಭವವನ್ನು ಧಾರೆಯೆರೆದು, ತಮ್ಮ ಶಾಲೆಯ ಯಾವುದೇ ವಿದ್ಯಾರ್ಥಿ ಅನುತ್ತೀರ್ಣರಾಗದಂತೆ ನೋಡಿಕೊಳ್ಳಬೇಕು ಎಂದರು.

ಜಿಲ್ಲೆಗೆ ಫಲಿತಾಂಶದಲ್ಲಿ ರ್ಯಾಂಕ್ ಬರುವುದು ಮುಖ್ಯವಲ್ಲ ಆದರೆ ಜಿಲ್ಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳೊಂದಿಗೆ ಪ್ರತಿಯೊಬ್ಬರೂ ಉತ್ತೀರ್ಣರಾಗಬೇಕು, ವಿದ್ಯಾರ್ಥಿಗಳಿಗೆ ಅನುದಾನಿತ ಶಾಲೆಗಳಲ್ಲಿ



ಇರುವ ಮೂಲಭೂತ ಸಮಸ್ಯೆಗ ಬಗ್ಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಅಲ್ಲಿನ ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ, ವಿದ್ಯಾರ್ಥಿಗಳಿಗೆ ಸೌಲಭ್ಯಗಳು ದೊರೆಯುವಂತೆ ನೋಡಿಕೊಳ್ಳಬೇಕು, ಶಾಲಾ ಪರೀಕ್ಷೆಯ ಫಲಿತಾಂಶದಲ್ಲಿ ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ, ಅವರ ಬಗ್ಗೆ ವೈಯಕ್ತಿಕವಾಗಿ ಗಮನಹರಿಸಿ ಉತ್ತೀರ್ಣರಾಗುವಂತೆ ಮಾಡಬೇಕು ಎಂದರು.

ವಿದ್ಯಾರ್ಥಿಗಳಿಗೆ ಪರೀಕ್ಷೆ ಎದು–ರಿಸುವ ಕುರಿತಂತೆ ಮತ್ತು ಪರೀಕ್ಷಾ ಕೊಠಡಿಯಲ್ಲಿ ಭಯ ಪಡದೇ ಉತ್ತರ ಬರೆಯುವ ಕುರಿತಂತೆ, ಸಮಯ ಪಾಲನೆ, ಒತ್ತಡ ನಿವಾರಣೆ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಮನಮುಟ್ಟುವಂತೆ ವಿಶೇಷ ಉಪನ್ಯಾಸ ಆಯೋಜಿಸಬೇಕು. ಪರೀಕ್ಷಾ ಸಮಯದಲ್ಲಿ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಮತ್ತು ಅವರ ಪೋಷಕರಿಗೆ ಸಲಹೆ ನೀಡಿ ಜಾಗೃತಿ ಮೂಡಿಸಬೇಕು. ಒಟ್ಟಿನಲ್ಲಿ ಶೇ. 100 ಫಲಿತಾಂಶ ಬರುವ ನಿಟ್ಟಿನಲ್ಲಿ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿ ಸಿಬ್ಬಂದಿಗಳು ಪರಸ್ಪರ ಸಮನ್ವಯದಿಂದ ಕರ್ತವ್ಯ ನಿರ್ವಹಿಸಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಈಶ್ವರ ಕಾಂದೂ ಮಾತನಾಡಿ, ಜಿಲ್ಲೆಯು ಎಸ್.ಎಸ್.ಎಲ್.ಸಿ. ಫಲಿತಾಂಶದಲ್ಲಿ ಕಳೆದ ಬಾರಿ ಈ ಹಿಂದಿಗಿಂತಲೂ ಉತ್ತಮ ಸಾಧನೆ ತೋರಿದೆ. ಶಾಲಾ ಪರೀಕ್ಷೆಯಲ್ಲಿ ಅನುತ್ತೀರ್ಣರಾಗುವ ವಿದ್ಯಾರ್ಥಿಗಳಿಗಾಗಿ ಶಿಕ್ಷಕರು ಹೆಚ್ಚುವರಿ ಸಮಯವನ್ನು ಮೀಸಲಿಟ್ಟು ಕಲಿಕೆಯಲ್ಲಿ ಹಿಂದುಳಿದಿರುವ ವಿಷಯಗಳನ್ನು ಭೋಧಿಸಬೇಕು. ಈ ಬಾರಿ ಪರೀಕ್ಷೆಯಲ್ಲಿ ಗ್ರೇಸ್ ಮಾರ್ಕ್ಸ್ ಇಲ್ಲವಾಗಿದ್ದು, ಜಿಲ್ಲೆಯಲ್ಲಿ ಕ್ವಾಲಿಟಿ ಫಲಿತಾಂಶ ಈ ಬಾರಿ ಬರುವಂತಾಗಬೇಕು. ವಿದ್ಯಾರ್ಥಿಗಳನ್ನು ತಮ್ಮ ಮನೆಯ ಮಕ್ಕಳ ವಿದ್ಯಾಭ್ಯಾಸಕ್ಕೆ ನೀಡುವ ರೀತಿಯಲ್ಲಿ ಕಾಳಜಿ ವಹಿಸಿ ಶಿಕ್ಷಕರು ಮೇಲ್ವಿಚಾರಣೆ ಮಾಡಬೇಕು. ಫಲಿತಾಂಶ ವೃದ್ಧಿಗೆ ಈಗಾಗಲೇ ರೂಪಿಸಿರುವ 20 ಅಂಶಗಳ ಅನುಷ್ಠಾನ ಮಾತ್ರವಲ್ಲದೇ ಡಯಟ್ ಮೂಲಕ ಹೆಚ್ಚಿನ ತರಬೇತಿಯ ಅಗತ್ಯವಿದಲ್ಲಿ ಪಡೆದು, ಸಂಘಟಿತ ಪ್ರಯತ್ನದ ಮೂಲಕ ಉತ್ತಮ ಫಲಿತಾಂಶ ಬರುವಂತೆ ಕಾರ್ಯನಿರ್ವಹಿಸಿ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕಾರವಾರ ಶೈಕ್ಷಣಿಕ ಜಿಲ್ಲೆಯ ಉಪನಿರ್ದೇಶಕಿ ಲತಾ ನಾಯ್ಕ, ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗಾಗಿ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದು, ಎಸ್.ಎಸ್.ಎಲ್.ಸಿ ವಿದ್ಯಾಥಿಗಳಿಗಾಗಿ ಪೂರ್ವಾಹ್ನ, ಅಪರಾಹ್ನ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆ, ಪ್ರತಿ ವಿದ್ಯಾರ್ಥಿಗೆ ಬಡ್ಡಿ ಪೇರಿಂಗ್ ಮಾಡಲಾಗಿದೆ, ವಿದ್ಯಾರ್ಥಿಗಳ ಗುಂಪು ರಚಿಸಿ ಅವರ ಫಲಿತಾಂಶ ವೃದ್ದಿಯ ಕುರಿತು ಶಿಕ್ಷಕರಿಗೆ ದತ್ತು ನೀಡಲಾಗಿದೆ. ಪ್ರತೀ ದಿನ ಮುಂಜಾನೆ ಶಿಕ್ಷಕರ ಮೂಲಕ ವೇಕ್ ಅಪ್ ಕಾಲ್ ಮಾಡಲಾಗುತ್ತಿದೆ, 15 ದಿನಗಳಿಗೊಮ್ಮೆ ಪೋಷಕರ ಸಭೆ ನಡೆಸಿ ವಿದ್ಯಾರ್ಥಿಗಳ ಪ್ರಗತಿಯ ವಿವರಗಳನ್ನು ನೀಡಲಾಗುತ್ತಿದೆ, ನಿರಂತರ ಗೈರು ಹಾಜರಾಗುತ್ತಿದ್ದ ವಿದ್ಯಾರ್ಥಿಗಳ ಮನೆ ಬೇಟಿ ನೀಡಿ ಗೈರಾಗುವುದನ್ನು ತಡೆಯಲಾಗಿದೆ. ಶಿಕ್ಷಕರಿಗೆ ವಿಶೇಷ ಸಮಾಲೋಚನಾ ಸಭೆಗಳನ್ನು ನಡೆಸಿ ತರಬೇತಿ ನೀಡಲಾಗಿದೆ. ಮಧ್ಯವಾರ್ಷಿಕ ಮತ್ತು ಪೂರ್ವ ಸಿದ್ದತಾ ಪರೀಕ್ಷೆಗಳಿಗೆ ಮಂಡಳಿಯಿಂದ ಆನ್‌ಲೈನ್‌ನಲ್ಲಿ ನೀಡುವ ಪ್ರಶ್ನೆಪತ್ರಿಕೆಗಳ ಬಗ್ಗೆ ಮಾಹಿತಿ ನೀಡಲಾಗಿದೆ. ಕ್ವಶ್ಚನ್ ಬ್ಯಾಂಕ್ ತಯಾರಿಸಲಾಗಿದೆ. ಡಿಸೆಂಬರ್ ಅಂತ್ಯದೊಳಗೆ ಎಸ್.ಎಸ್.ಎಲ್.ಸಿ ಪಠ್ಯವಸ್ತುವನ್ನು ಪೂರ್ಣಗೊಳಿಸಲಾಗಿದೆ. ಶಾಲಾ ಹಂತದ ಮೊದಲನೇ ಪೂರ್ವ ಸಿದ್ದತಾ ಪರೀಕ್ಷೆ ನಡೆಸಲಾಗಿದ್ದು, ಪರೀಕ್ಷೆ ದಿನಾಂಕಕ್ಕಿಂತ ಮುಂಚಿತವಾಗಿ, ಸ್ಮಾರ್ಟ್ ಆಗಿ ಅಂಕಗಳಿಸುವ ಟ್ರಿಕ್‌ಗಳ ಕುರಿತಂತೆ ಸಂಕಲ್ಪ ಶಿಬಿರ ಮತ್ತು ಸಂಪನ್ಮೂಲ ವ್ಯಕ್ತಿಗಳಿಂದ ಅಭಿಪ್ರೇರಣಾ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು.

ಸಭೆಯಲ್ಲಿ ಡಯಟ್ ಪ್ರಾಂಶುಪಾಲ ಶಿವರಾಂ, ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ ತಾಲೂಕುಗಳು ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು, ತಾಲೂಕು ಶಿಕ್ಷಣಾಧಿಕಾರಿಗಳು ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

## ಅಲಗೇರಿ ನಿರಾಶ್ರಿತರಿಗೆ ನಿವೇಶನ ಹಂಚಿಕೆ: ಶಾಸಕ ಸೈಲ್



**ಕಾರವಾರ,** : ಅಲಗೇರಿ ವಿಮಾನ ನಿಲ್ದಾಣದ 76 ಜನ ನಿರಾಶ್ರಿತರಿಗೆ ಪರಿಹಾರ ವಿತರಣೆಯಲ್ಲಿ ಇರುವ ಅಸಮಾಧಾನವನ್ನು ಹೊಗಲಾಡಿಸಿ, ಅವರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಚೀಟಿ ಎತ್ತುವ ಮೂಲಕ 60*90 ಜಾಗವನ್ನು ನೀಡಲಾಗುತ್ತದೆ ಎಂದು ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಏಜೇನ್ಸಿ ಲಿಮಿಟೆಡ್ ಅಧ್ಯಕ್ಷ ಹಾಗೂ ಶಾಸಕ ಸತೀಶ್ ಕೆ. ಸೈಲ್ ಹೇಳಿದರು.

ಅವರು ಗುರುವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ, ಅಲಗೇರಿ ನಿರಾಶ್ರಿತರಿಗೆ ನಿವೇಶನ ಹಂಚುವ ಕುರಿತ ಸಭೆಯಲ್ಲಿ ಮಾತನಾಡಿದರು.

ಜಾಗವನ್ನು ಆಳತೆ ಮಾಡುವಾಗ ರಿಜಿಸ್ಟ್ರೇಷನ್ ಕಚೇ–ರಿಯಿಂದ ಮೂರು ವರ್ಷದ ದಾಖಲೆಗಳನ್ನು ತೆಗೆದುಕೊಂಡು ಪರಿಗಣಿಸಿ ಮಾಡಿರುವುದರಿಂದ ನಾಲ್ಕು ರೀತಿಯಲ್ಲಿ ಬೆಲೆ ಬಂದಿದ್ದು ಅದರಿಂದ ನಿರಾಶ್ರಿತರು ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಮೊದಲು ನೀಡಿದ್ದ 5 ಗುಂಟೆ ಜಾಗದಲ್ಲಿ 30*40 ರಂತೆ ನಿರಾಶ್ರಿತರಿಗೆ ಜಾಗವನ್ನು ನೀಡಲಾಗಿ–ತ್ತು. ಈ ಜಾಗದಿಂದ ಸುವ್ಯವಸ್ಥಿತವಾದ ಮನೆಗಳನ್ನು ನಿರ್ಮಿಸಲು ಸಾಧ್ಯವಾಗದೆ ಇರುವ ಕಾರಣ ಅವರಿಗೆ 60*90 ಜಾಗವನ್ನು ಹಸ್ತಾಂತರಿಸಲು ಸೂಚಿಸಲಾಗಿದೆ ಹಾಗೂ ಎಕ್ಸ್‌ಗ್ರೇಶಿಯಾ 11 ಕೋಟಿ ಅನುದಾನವನ್ನು ಸಹ ಬಿಡುಗಡೆ ಮಾಡಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಈ ಅನುದಾನ ಬಿಡುಗಡೆಯಾದ ತಕ್ಷಣ ನಿರಾಶ್ರೀತರಿಗೆ ಯಾರಿಗೂ ಅನ್ಯಾಯವಾಗದಂತೆ ಸುಸಜ್ಜಿತವಾದ ವ್ಯವಸ್ಥೆಯನ್ನು ಕಲ್ಪಿಸಲಾಗುವುದು ಎಂದರು.

ವಿಮಾನ ನಿಲ್ದಾಣಕ್ಕೆ ಇನ್ನೂ ಅಗತ್ಯವಿರುವ 6 ಎಕರೆ ಜಾಗವನ್ನು ಪರಿಶೀಲಿಸಿ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ವ್ಯವಸ್ಥೆಯನ್ನು ಮಾಡಲಾಗುತ್ತದೆ ಎಂದರು.

ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ ಹಾಗೂ ಅಲಗೇರಿ ವಿಮಾನ ನಿಲ್ದಾಣದ ನಿರಾಶ್ರಿತರು ಉಪಸ್ಥಿತರಿದ್ದರು

## ಗಾಯನ ಪ್ರತಿಭಾ ಪ್ರಶಸ್ತಿ ಸಿಜನ್–8 ರ ಗ್ರ್ಯಾಂಡ್ ಫಿನಾಲೆ ಕಾರ್ಯಕ್ರಮಕ್ಕೆ ಚಾಲನೆ



ರಾಯಬಾಗ: ಶಾಸಕ ಐಹೊಳೆಯವರು ಆಯೋಜಿಸಿರುವ ಗಾಯನ ಪ್ರತಿಭಾ ಪ್ರಶಸ್ತಿ ಸ್ಪರ್ಧೆಯ ಉತ್ತರ ಕರ್ನಾಟಕದ ಈ ವೇದಿಕೆಯಿಂದ ಗ್ರಾಮೀಣ ಭಾಗದ ಯುವ ಪ್ರತಿಭಾವಂತ ಗಾಯಕರು ಬೆಳಗಾವಿಯಿಂದ ಬೆಂಗಳೂರುವರೆಗೆ ಹೋಗಲು ಅವಕಾಶ ಮಾಡಿಕೊಟ್ಟಿದೆ ಎಂದು ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಬುಧವಾರ ಸಾಯಂಕಾಲ ಪಟ್ಟಣದ ಮಹಾವೀರ ಭವನದ ಆವರಣದಲ್ಲಿ ಶಾಸಕ ದುರ್ಯೋಧನ ಐಹೊಳೆಯವರ ಹುಟ್ಟುಹಬ್ಬದ ಪ್ರಯುಕ್ತ ಹಮ್ಮಿಕೊಂಡಿದ್ದ ಐಹೊಳೆ ಗಾಯನ ಪ್ರತಿಭಾ ಪ್ರಶಸ್ತಿ ಸಿಜನ್–8 ರ ಗ್ರ್ಯಾಂಡ್ ಫಿನಾಲೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ದೇಶಿಯ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಎಲ್ಲರೂ ಕೈಜೋಡಿಸಬೇಕೆಂದರು.

ಸಾನ್ನಿಧ್ಯವನ್ನು ಚಿಕ್ಕೋಡಿ ಸಂಪಾದನಾ ಚರಮೂರ್ತಿ ಮಠದ ಸಂಪಾದನಾ ಸ್ವಾಮೀಜಿ ವಹಿಸಿದ್ದರು.

ಶಾಸಕ ಡಿ.ಎಮ್.ಐಹೊಳೆಯವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಕಾರ್ಯಕ್ರಮಲ್ಲಿ ಚಿತ್ರ ನಟಿ ಮಾಲಾಶ್ರೀ, ಆರಾಧನಾ, ಹಿನ್ನೆಲೆ ಗಾಯಕಿ ಡಾ.ಶಮೀತಾ ಮಲ್ನಾಡ, ನಟ, ನಿರ್ದೇಶಕ ರಾಧಾಕೃಷ್ಣ ಪಲ್ಲಕ್ಕಿ, ತಹಶೀಲ್ದಾರ ಸುರೇಶ ಮುಂಜೆ, ಬಸವಪ್ರಸಾದ ಜೋಲ್ಲೆ, ರೀಯಾಜ ಚೌಗಲಾ, ಮಹೇಶ ಭಾತೆ, ಭರತೇಶ ಬನವಣೆ, ಮಲ್ಲಪ್ಪ ಮೈಶಾಳೆ, ತಾತ್ಯಾಸಾಬ ಕಾಟೆ, ಪೃಥ್ವಿರಾಜ ಜಾಧವ, ಅಮೀತ ಜಾಧವ, ವಿಜಯ ಕೋಟಿವಾಲೆ, ಸದಾಶಿವ ಘೋರ್ಪಡೆ, ಅಣ್ಣಾಸಾಹೇಬ ಖೆಮಲಾಪೂರೆ, ಸದಾನಂದ ಹಳಿಂಗಳಿ, ರಾಜಶೇಖರ ಖನದಾಳೆ, ಅಪ್ಪಾಸಾಬ ಬ್ಯಾಕೂಡೆ, ಮಹಾದೇವ ಬೊರಗಾಂವೆ, ಅರುಣ ಐಹೊಳೆ, ಶಿವಾನಂದ ಐಹೊಳೆ, ಮಹೇಶ ಕರಮಡಿ ಸಮಾಜ ಕಲ್ಯಾಣ ಅಧಿಕಾರಿ ವಿಠ್ಠಲ ಚಂದರಗಿ ಸೇರಿ ಅನೇಕರು ಇದ್ದರು.

## ತಮ್ಮ ಬದುಕು ಕಟ್ಟಿಕೊಂಡು ಇನ್ನೊಬ್ಬರಿಗೆ ಮಾದರಿಯಾಗಬೇಕು -ನಟರಾಜ ಎಲ್.ಎಂ



ಇಂಡಿ: ಸ್ವಯಂ ಉದ್ಯೊಗ ಮಾಡುವ ಮೂಲಕ ಸಾವಲಂಬಿಯಾಗಿ ತಮ್ಮ ಬದುಕು ಕಟ್ಟಿ ಇನ್ನೊಬ್ಬ–ರಿಗೆ ಮಾದರಿಯಾಗುವ ನಿಟ್ಟಿನಲ್ಲಿ ನಮ್ಮ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆ ಹಾಗೂ ರುಡ್ ಸೆಟ್ ಸಂಸ್ಥೆಯು ಮಾಡುತ್ತಿದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆ ತಾಲೂಕಾ ಯೋಜನಾಧಿಕಾರಿ ನಟರಾಜ ಎಲ್.ಎಂ ಹೇಳಿದರು.

ಅವರು ತಾಲೂಕಿನ ಲಚ್ಯಾಣ ಗ್ರಾಮದ ಶ್ರೀ ಸಿದ್ದಲಿಂಗಮಹಾರಾಜರ ಕಮರಿ ಮಠದ ಆವರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆ ಹಾಗೂ ರುಡ್ ಸೆಟ್ ಸಂಸ್ಥೆ ವಿಜಯಪುರ ಸಹಭಾಗಿತ್ವದಲ್ಲಿ ಹಮ್ಮಿಕೊಂಡ ಸೃಜನಶೀಲ ಕಾರ್ಯಕ್ರಮದಲ್ಲಿ ಮೃದು ಗೊಂಬೆಗಳ ತಯಾರಿಕೆ ಹಾಗೂ ಮಾರಾಟ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಈಗಾಗಲೆ ನಮ್ಮ ಸಂಸ್ಥೆಗಳಡಿಯಲ್ಲಿ ಸಾಕಷ್ಟು ತರಬೇತಿಗಳನ್ನು ನೀಡಿದ್ದು ಇದರ ಸದುಪಯೋಗವನ್ನು ಮಹೀಳೆಯರು ಸೇರಿದಂತೆ ಯುವಕರು ಪಡೆದುಕೊಂಡಿದ್ದಾರೆ. ಅದರಂತೆ ಮುಂಬರುವ ಇಂತಹ ತರಬೇತಿ ಶೀಬಿರಗಳಲ್ಲಿ ಹೆಚ್ಚಿನ ಪ್ರಮಾಣ ನಿರುದ್ಯೊಗಿ ಯುವ ಮಿತ್ರರು ಹಾಗೂ ಹೆಣ್ಣುಮಕ್ಕಳು ಭಾಗವಹಿಸಿ ಇದರ ಲಾಭ ಪಡೆದುಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಅಗ್ರಣಿಯ ಪ್ರಬಂಧಕರಾದ ನೇತಾಜಿ ಗೌಡರ, ರುಡ್‌ಸೆಟ್ ಸಂಸ್ಥೆಯ ನಿರ್ದೇಶಕ ಮುತ್ತಣ್ಣ ಧನಕರ್, ಐಟಿಐ ಕಾಲೇಜು ಪ್ರಚಾರ್ಯ ಪಿ.ಬಿ.ಉಪ್ಪಾರ, ಅಕ್ಷಯ ಮುಜಗೊಂಡ, ವಲಯ ಮೇಲ್ವಿಚಾರಕರು ಹುಸೇಸಾಬ ಕಾಗದ, ಜಯಶ್ರೀ, ಭೌರಮ್ಮ ಸಂಗಿತಾ,ಪ್ರಭಾವತಿ, ಸುಮಿತ್ರ ಅಲ್ಲದೆ ಬೇಕು. ಮೂಲಕ ಕಾರ್ಯಗಳನ್ನು ಪೋಟೊ ಕ್ಯಾಪ್ಸನ್ 24 ಇಂಡಿ 01: ತಾಲೂಕಿನ ಲಚ್ಯಾಣ ಗ್ರಾಮದ ಶ್ರೀ ಸಿದ್ದಲಿಂಗಮಹಾರಾಜರ ಕಮರಿ ಮಠದ ಆವರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆ ಹಾಗೂ ರುಡ್ ಸೆಟ್ ಸಂಸ್ಥೆ ವಿಜಯಪುರ ಸಹಭಾಗಿತ್ವದಲ್ಲಿ ಹಮ್ಮಿಕೊಂಡ ಸೃಜನಶೀಲ ಕಾರ್ಯಕ್ರಮದಲ್ಲಿ ಮೃದು ಗೊಂಬೆಗಳ ತಯಾರಿಕೆ ಹಾಗೂ ಮಾರಾಟ ತರಬೇತಿ ಕಾರ್ಯಕ್ರಮವನ್ನು ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆ ತಾಲೂಕಾ ಯೋಜನಾಧಿಕಾರಿ ನಟರಾಜ ಎಲ್.ಎಂ ಉದ್ಘಾಟಿಸಿ ಮಾತನಾಡಿದರು

## ಡಾ॥ ಎತ್ತಿನಮನಿಗೆ ರಾಷ್ಟೀಯ ಪ್ರಶಸ್ತಿ

ಗೋಕಾಕ ನಗರದ ಚಾರ್ಮರೋಗ ತಜ್ಞ ಹಾಗೂ ಸಮಾಜ ಸೇವಕ ಡಾ ॥ ಪ್ರಮೋದ ಪ್ರ ಎತ್ತಿನಮನಿ ಅವರಿಗೆ ಬೆಳಗಾವಿಯ ಕುಮಾರ ಗಂಧರ್ವ ಸಮುದಾಯ ಭವನದಲ್ಲಿ ಚೈತನ್ಯ ಪೌಂಡೇಷನ್ ವತಿಯಿಂದ ಸಂಗೊಳ್ಳಿ ರಾಯಣ್ಣ ರಾಷ್ಟೀಯ ಪ್ರಶಸ್ತಿ ನೀಡಿದ ಪ್ರಯುಕ್ತ ಯೋಗ ಗುರು ಆನಂದ ಸೋರಗಾಂವಿ ಚಿಂತಕರಾದ ಡಾ. ಅರುಣ ಸವತೆಕಾಯಿ ಹಾಗೂ ವಿಜಯಕುಮಾರ ಚಚಡಿ ಅಭಿನಂದನೆ ಸಲ್ಲಿಸಿದರು.



# ಶಾಲೆ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮ



ಗೋಕಾಕ: ಶಿಕ್ಷಣ ವ್ಯಾಪಾರಿಕರಣವಾಗದೇ ಸೇವೆಯಾಗಬೇಕು ಎಂದು ಇಲ್ಲಿಯ ಶೂನ್ಯ ಸಂಪಾದನ ಮಠದ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ಹೇಳಿದರು.

ಅವರು, ಶುಕ್ರವಾರದಂದು ನಗರದ ಭಾರತೀಯ ವಿದ್ಯಾ ಮಂದಿರ ಹಾಗೂ ನೇತಾಜಿ ಆಂಗ್ಲ ಮಾಧ್ಯಮ ಶಾಲೆ ವಾರ್ಷಿಕ ಸ್ನೇಹ ಸಮ್ಮೇಳನದ ದಿವ್ಯ ಸಾನಿಧ್ಯ ವಹಿಸಿ ಮಾತನಾಡುತ್ತಿದ್ದರು.

ಶಿಕ್ಷಣದೊಂದಿಗೆ ಮಕ್ಕಳಿಗೆ ಆದ್ಯಾತ್ಮವನ್ನು ಭೋಧಿಸಿ ಅವರನ್ನು ಸಂಸ್ಕಾರವಂತರಾಗಿ ಮಾಡಬೇಕು. ತಂದೆ-ತಾಯಿ ಸಂಸ್ಕಾರವಂತರಾದರೇ ಅದು ಮಕ್ಕಳಲ್ಲಿಯೂ ಬರುತ್ತದೆ. ಇಂದು ನಗರ ಬೆಳಗಾವಿ ನಂತರ ಶೈಕ್ಷಣಿಕವಾಗಿ ಪ್ರಗತಿ ಸಾಧಿಸುತ್ತಿದೆ. ಅಂತಹ ಸಂಸ್ಥೆಗಳಲ್ಲಿ ಭಾರತೀಯ ವಿದ್ಯಾ ಮಂದಿರವು ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸುತ್ತ 20ವರ್ಷಗಳನ್ನು ಪೂರೈಸಿರುವದು ಶ್ಲಾಘನೀಯ ಎಂದ ಅವರು ಸಂಸ್ಥೆ ಇನ್ನು ಹೆಮ್ಮರವಾಗಿ ಬೆಳೆಯಲಿ ಎಂದು ಹಾರೈಸಿದರು.

ಕಾರ್ಯಕ್ರಮವನ್ನು ಕಾರ್ಮಿಕ ಮುಖಂಡ ಅಂಬಿರಾವ ಪಾಟೀಲ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮ ಉದ್ಘಾಟಿಸಿದರು.

ವೇದಿಕೆಯ ಮೇಲೆ ಕ್ಷೇತ್ರ ಶಿಕ್ಷಣಾಧಿಕಾರಿ ಜಿ ಬಿ ಬಳಗಾರ, ಸಂಸ್ಥೆಯ ಅಧ್ಯಕ್ಷ ನವೀನ ಜರತಾರಕರ, ಪದಾಧಿಕಾರಿಗಳಾದ ಸಿ ವ್ಹಿ ದೇಮಶೆಟ್ಟಿ, ವ್ಹಿ ಬಿ ಧೂಳಾಯಿ, ಜಿ ವ್ಹಿ ಝುಂವರ, ವ್ಹಿ ವ್ಹಿ ಜರತಾರಕರ, ವ್ಹಿ ಜೆ ಝುಂವರ, ಎಸ್ ಜಿ ತಾಂವಶಿ, ವೈ ಕೆ ಬಾಗಾಯಿ, ಜಿ ಎಸ್ ಶೆಟ್ಟಿ, ರಾಜಶ್ರೀ ಒಡೆಯರ, ಶ್ರೀಕಾಂತ ಮಗೇನ್ನವರ, ಬಸವರಾಜ ಕಲ್ಲೋಳಿ, ಆಡಳಿತಾಧಿಕಾರಿ ವೈ ಎನ್ ನನದಿಕರ, ಮುಖ್ಯೋಪಾಧ್ಯಾಯರಾದ ಬಿ ಎಸ್ ಹುಬ್ಬಳ್ಳಿ, ಆರ್ ಎಮ್ ನುಚ್ಚಿ, ವಿದ್ಯಾರ್ಥಿ ಪ್ರತಿನಿಧಿಗಳಾದ ವಿಠ್ಠಲ ಸೊಂಟಕ್ಕಿ, ವೈಷ್ಣವಿ ಮುಳಗುಂದ ಇದ್ದರು.



ಗೋಕಾಕ: ನಗರದ ಗುರುವಾರ ಪೇಟೆ ಗರಡಿಗಲ್ಲಿಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಕೇಂದ್ರದ ಮಕ್ಕಳಿಗೆ ಶಿವಲೀಲಾ ಬೆಳ್ಳಂಕಿಮಠ ಫೌಂಡೇಷನ ಟ್ರಸ್ಟ್ ಕಮಿಟಿ ಗೋಕಾಕ ವತಿಯಿಂದ ಸಮವಸ್ತ್ರಗಳನ್ನು ಫೌಂಡೇಷನ ಅಧ್ಯಕ್ಷರಾದ ದೇವು ಬೆಳ್ಳಂಕಿಮಠ ನೇತೃತ್ವದಲ್ಲಿ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಅಂಗನವಾಡಿ ಕೇಂದ್ರದ ಮೇಲ್ವಿಚಾರಕರಾದ ಶ್ರೀಮತಿ ನಸರೀನ ಕೊಣ್ಣೂರ, ಕಾರ್ಯಕರ್ತೆ ಸರೀತಾ ಕವಳೆಕರ, ಈರಣ್ಣ ಹಿರೇಮಠ, ಕೃಷ್ಣಾ ಖಾನಪ್ಪನವರ ಸೇರಿದಂತೆ ಅನೇಕರು ಇದ್ದರು.

# ಶ್ರೀ ಸಿದ್ದಾರೂಢ ಶ್ರೀಗಳ ಜ್ಯೋತಿಗೆ ಭವ್ಯ ಸ್ವಾಗತ



ಘಟಪ್ರಭಾ: ಮಹಾತಪಸ್ವಿ ಶ್ರೀ ಸಿದ್ಧಾರೂಢ ಮಹಾಸ್ವಾಮಿಗಳವರ ಜನ್ಮ ಭೂಮಿಯಾದ ಬೀದರ ಜಿಲ್ಲೆಯ ಚಳಕಾಪೂರದಿಂದ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಮಠಕ್ಕೆ ಹೊರಟಿರುವ ಶ್ರೀ ಸಿದ್ಧಾರೂಢ ಜ್ಞಾನ ಜ್ಯೋತಿ ಯಾತ್ರೆಗೆ ಘಟಪ್ರಭಾ ನಗರದಲ್ಲಿ ಭವ್ಯ ಸ್ವಾಗತ ಕೋರಲಾಯಿತು. ಇಲ್ಲಿಂದ ದುಪದಾಳ ಶ್ರೀ ಚಿದಂಬರ ಆಶ್ರಮದಲ್ಲಿ ಪೂಜ್ಯ ಭೀಮಾನಂದ ಶ್ರೀಗಳ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜ್ಯೋತಿ ಯಾತ್ರೆ ಯ ನೇತೃತ್ವ ವಹಿಸಿದ ಶಾಮಾನಂದ ಪೂಜೇರಿ ವಕೀಲರು, ಕೊಣ್ಣೂರದ ಶ್ರೀ ಬಸವರಾಜ ಶರಣರು, ಬಿಜೆಪಿ ನಾಯಕ ಸುರೇಶ್ ಪಾಟೀಲ, ಸಾಮಾಜಿಕ ಕಾರ್ಯಕರ್ತರಾದ ಶ್ರೀಕಾಂತ ವಿ ಮಹಾಜನ,ಕರವೇ ಅಧ್ಯಕ್ಷ ಕೆಂಪಣ್ಣ ಚೌಕಶಿ ಮುಂತಾದವರನ್ನು ದುಪದಾಳ ಮಠದ ವತಿಯಿಂದ ಸನ್ಮಾನ ಮಾಡಿ ಗೌರವಿಸಲಾಯಿತು, ಈ ಸಂದರ್ಭದಲ್ಲಿ ರಾಮಣ್ಣ ಹುಕ್ಕೇರಿ, ಸುಭಾಷ್ ದಡ್ಡೀಕರ, ಡಾ, ವಿಜಯ ಪಾಟೀಲ ಸಚಿವ ಖಡಬಡಿ, ಬಸವರಾಜ ಬೆಳ್ಳಣ್ಣವರ , ಕಲ್ಲಪ್ಪಾ ಕಾಳಗೆ, ಸುಭಾಸ ಗಾಯಕವಾಡ, ಮಲ್ಲಪ್ಪಾ ಮಹಾರಾಜ ಹುಕ್ಕೇರಿ, ರಾಜು ಕತ್ತಿ,ಕೆ ಡಿ ವಾಲಿಕಾರ, ಕೆ ಟಿ ಕರಿಗಾರ, ಮಾರುತಿ ಉಮರಾಣಿ, ಈಶ್ವರ ಚೌಗಲಾ ಯಲ್ಲಪ್ಪ ಅಟ್ಟಿಮಿಟ್ಟಿ ಸೇರಿದಂತೆ ಘಟಪ್ರಭಾ, ದುಪದಾಳದ ಶ್ರೀ ಸಿದ್ಧಾರೂಢ ಭಕ್ತರು ಹಾಜರಿದ್ದರು.

******

# ಸಖಿ ಒನ್ ಸ್ಟಾಫ್ ಸೆಂಟರ್ ಕೇಂದ್ರ ವಾಹನಗಳಿಗೆ ಜಿಲ್ಲಾಧಿಗಳಿಂದ ಚಾಲನೆ



ಹಾವೇರಿ: ಸಖಿ ಕೇಂದ್ರದ ಮಹಿಳೆಯರ ರಕ್ಷಣೆ ಹಾಗೂ ತುರ್ತು ನೆರವು, ದೂರ ಪ್ರದೇಶಗಳಲ್ಲಿ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುವ ಮಹಿಳೆಯರಿಗೆ ಸಂಕಷ್ಟ ಪರಿಸ್ಥಿತಿಗಳಲ್ಲಿ ವಾಹನ ಸೌಲಭ್ಯ ಒದಗಿಸಲು ಮಂಜೂರಾದ ಬಾಡಿಗೆ ವಾಹನಕ್ಕೆ ಹಾಗೂ ಜಿಲ್ಲಾ ಸಬಲೀಕರಣ ಘಟಕ ಯೋಜನೆಯ ಕಾರ್ಯ ಚಟುವಟಿಕೆಗಳ ಅನುಕೂಲಕ್ಕಾಗಿ ಮಂಜೂರಾದ ಬಾಡಿಗೆ ವಾಹನಕ್ಕೆ ನಗರದ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಶುಕ್ರವಾರ ಜಿಲ್ಲಾಧಿಕಾರಿಗಳಾದ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಚಾಲನೆ ನೀಡಿದರು.

ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ವೈದ್ಯಕೀಯ ಸೇವೆ, ಪೋಲಿಸ್ ಸೇವೆ, ಕಾನೂನು ಸೇವೆ, ಸಮಾಲೋಚನೆ ಮತ್ತು ತಾತ್ಕಾಲಿಕ ವಸತಿ ಒದಗಿಸುವ ಸಖಿ ಒನ್ ಸ್ಟಾಫ್ ಸೆಂಟರ್ ಕೇಂದ್ರ ಸರ್ಕಾರದ ಮಹತ್ವಾಕಾಂಶಿ ಯೋಜನೆಯಾಗಿದೆ. ಹಾವೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ನಿರ್ವಹಣೆ ಮಾಡಲಾಗುತ್ತಿದೆ.

ಜಿಲ್ಲಾ ಆಸ್ಪತ್ರೆ ಆವರಣದಲ್ಲಿರುವ ಸಖಿ ಒನ್ ಸ್ಟಾಫ್ ಸೆಂಟರ್‌ಗೆ ಜಿಲ್ಲಾಧಿಕಾರಿಗಳು ಭೇಟಿ ನೀಡಿ, ಸ್ವಂತ ಕಟ್ಟಡ ನಿರ್ವಹಣೆ, ಸಿಬ್ಬಂದಿಗಳ ಕಾರ್ಯವೈಖರಿ ಪರಿಶೀಲಿಸಿ, ವಿವಿಧ ಸಲಹೆ ಸೂಚನೆಗಳನ್ನು ನೀಡಿದರು. ಸಮಾಜ ಮುಖಿಯಾಗಿ ಕಾರ್ಯನಿರ್ವಹಿಸುತ್ತಿರುವ ಸಖಿ ಒನ್ ಸ್ಟಾಫ್ ಸೆಂಟರ್ ಸಿಬ್ಬಂದಿಗಳನ್ನು ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಜಿ ಲ ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಕ್ಷಯ್ ಶ್ರೀಧರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಶ್ರೀನಿವಾಸ.ವೈ.ಆಲದಾರ್ತಿ ಇತರರು ಹಾಜರಿದ್ದರು.

*********

# ಅಭಿಮಾನಿಗಳಿಂದ ಕಾರಜೋಳರ 75.ನೇ ಹುಟ್ಟುಹಬ್ಬ ಆಚರಣೆ

## ಕ್ಷೇತ್ರದ ಅಭಿವೃದ್ಧಿಯಿಂದ ಜನರ ಋಣ ತೀರಿಸಬಹುದು : ಕಾರಜೋಳ

ಮುಧೋಳ: ಮೀಸಲು ಮತಕ್ಷೇತ್ರದಲ್ಲಿ ಕಳೆದ 30.ವರ್ಷ ನಿರಂತರ ಸೇವೆಯಿಂದ ಶೇ.35.ರಿಂದ ಶೇ.100.ರವರೆಗೆ ಜಿಎಲ್‌ಬಿಸಿ. ನೀರಾವರಿ ಆಗಿರುವದರಿಂದ ಈ ಮೊದಲು ಕಬ್ಬು 5.ಲಕ್ಷ ಟನ್‌ದಿಂದ ಈಗ ಕ್ಷೇತ್ರದಲ್ಲಿ 1.ಕೋಟಿವರೆಗೆ ಹೆಚ್ಚಾಗಿರುವದರಿಂದ ಹಾಗು ಇತರೆ ವ್ಯವಹಾರಗಳಿಂದ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 25.ಸಾವಿರ ಕೋಟಿ ವ್ಯವಹಾರ ನಡೆದು ಮುಧೋಳ ತಾಲೂಕಿನ ಶ್ರೀಮಂತಿಕೆ ಹೆಚ್ಚಾಗಿದೆ. ಎಂದು ಮಾಜಿ ಡಿಸಿಎಂ. ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಹೇಳಿದರು.

ಶನಿವಾರ ನಗರದ ದಾನಮ್ಮದೇವಿ ಸಮುದಾಯ ಭವನದಲ್ಲಿ ಅಭಿಮಾನಿಗಳಿಂದ ತಮ್ಮ 75.ನೇ ಹುಟ್ಟು ಹಬ್ಬದ ಪ್ರಯುಕ್ತ ಗೋಶಾಲೆಗೆ ಹಾಗು ವಿವಿಧ ದೇವಸ್ಥಾನ, ದರ್ಗಾಗೆ ತೆರಳಿ ಪೂಜೆ, ಅನಾಥ, ಬಡರೋಗಿಗಳಿಗೆ ಹಣ್ಣು-ಹಂಪಲ ಮತ್ತು ಸರಕಾರಿ ಶಾಲೆಯ 1.ರಿಂದ 7.ನೇ ತರಗತಿಯ ಬಡ ವಿದ್ಯಾರ್ಥಿಗಳಿಗೆ ಬ್ಯಾಗ್, 1.ರಿಂದ 5.ನೇ ತರಗತಿಯ ಮಕ್ಕಳಿಗೆ ಅಂದಾಜು 24.ಸಾವಿರ ಬಟ್ಟೆಗಳನ್ನು ವಿತರಿಸಿ ನಂತರ ಅಭಿಮಾನಿಗಳ ಸಭೆಯಲ್ಲಿ ಅವರು ಮಾತನಾಡಿದರು.




ಜನಪ್ರತಿನಿಧಿಗಳಾಗಿ ಜನರಿಗಾಗಿ ಏನು ಮಾಡಿದ್ದೀವಿ ಎಂದು ಪ್ರಶ್ನಿಸಿಕೊಂಡು ತಾವಿರುವ ಕ್ಷೇತ್ರದ ಸಮಗ್ರ ಅಭಿವೃದ್ಧಿಯಿಂದ ಮಾತ್ರ ಅವರ ಋಣ ತೀರಿಸಿದಂತಾಗುತ್ತದೆ. ಈ ಕ್ಷೇತ್ರದಲ್ಲಿ 70. ವರ್ಷಗಳಿಂದ ಆಗದ ಅಭಿವೃದ್ಧಿಯನ್ನು ನನ್ನ ಅವಧಿಯಲ್ಲಿ ಮಾಡಿರುವ ನೀರಾವರಿ ಸೇರಿ ಹಲವಾರು ಅಭಿವೃದ್ಧಿ ಕೆಲಸ ಬೊಟ್ಟು ಮಾಡಿ ತೋರಿಸಬಲ್ಲೆ, ಕಳೆದ ಚುನಾವಣೆಯಲ್ಲಿ ಸೋತಿರಬಹುದು, ಸೋಲು-ಗೆಲುವು ಸಾಮಾನ್ಯ ಅವತ್ತಿನ ಸ್ಥಿತಿ-ಗತಿ, ಪಂಚ ಗ್ಯಾರಂಟಿ ಅಂಗೈಯಲ್ಲಿ ತೋರಿಸಿ, ಇವರಿಗೆ ನದಿಯಲ್ಲಿನ ಉಸುಕು ಸಹಿತ ಸಾಲ್ತಾಯಿಲ್ಲ ಎಂದು ಖಾರವಾಗಿ ಅವರು ನುಡಿದರು.

ಚಿತ್ರದುರ್ಗ ಭಾಜಪಾ. ಜಿಲ್ಲಾ ಅಧ್ಯಕ್ಷ ಮುರಳಿ ಮಾತನಾಡಿ, ಮಾಜಿ ಡಿಸಿಎಂ. ಕಾರಜೋಳರಿಂದ ನಿಮ್ಮ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿಕೊಂಡು ಹಿಂದುಳಿದ ನಮ್ಮ ಚಿತ್ರದುರ್ಗ ಕ್ಷೇತ್ರಕ್ಕೆ ಆಗಮಿಸಿದ್ದು ನಮ್ಮ ಪುಣ್ಯ, ಇವರ ಮುಖ ನೋಡದ ನಮ್ಮ ಕ್ಷೇತ್ರದವರು ಇವರು ಸಣ್ಣ ನೀರಾವರಿ ಇಲಾಖೆಯಿಂದ ವಿಧಾನಸಭಾ ಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಕೆಲಸಗಳು ಕಂಡು ಕಾರ್ಯಕರ್ತರಲ್ಲಿ ಹುಮ್ಮಸ್ಸು ಬಂದಿತ್ತು, ಶರಣರ ಕ್ಷೇತ್ರದ ಬಂದಿರುವ ಕಾರಜೋಳರಿಗೆ ಮುಂಬರುವ ದಿನಗಳಲ್ಲಿ ಶೇ.ನೂರರಷ್ಟು ಅಧಿಕಾರ ನಿಶ್ಚಿತ ಎಂದರು.

ವಿರಕ್ತಮಠದ ಬಸವಲಿಂಗ ಶ್ರೀಗಳು ಸಾನಿಧ್ಯ, ಭಾಜಪಾ ಗ್ರಾಮೀಣ ಮಂಡಳ ಅಧ್ಯಕ್ಷ ಸಂಗಣ್ಣ ಕಾತರಕಿ, ನಗರ ಅಧ್ಯಕ್ಷ ಕೆ.ಆರ್. ಹಿರೇಮಠ, ಶಾಂತಾದೇವಿ ಗೋ. ಕಾರಜೋಳ, ಅರುಣ ಜಿ. ಕಾರಜೋಳ, ಶ್ರೀಶೈಲಗೌಡ ಪಾಟೀಲ, ನಾಗಪ್ಪ ಅಂಬಿ, ಸೋನಾಪ್ಪಿ ಕುಲಕರ್ಣಿ, ಚಿತ್ರದುರ್ಗ ಜಿಪಂ. ಮಾಜಿ ಅಧ್ಯಕ್ಷ ಮಹಾಲಿಂಪ್ಪ, ಶೈಲಜಾ ಕೊಟ್ರಿ ಹಾಗು ಪಕ್ಷದ ಮುಖಂಡರು, ಪದಾಧಿಕಾರಿಗಳು, ಅಭಿಮಾನಿಗಳು ಇತರರಿದ್ದರು.

# ಶ್ರೀ ಭ್ರಮರಾಂಭಾದೇವಿ ಪ್ರಾಣ ಪ್ರತಿಷ್ಠಾಪನೆ ಮತ್ತು ಉದ್ಘಾಟನಾ ಕಾರ್ಯಕ್ರಮ

ಗೋಕಾಕ: ತಾಲೂಕಿನ ಸುಕ್ಷೇತ್ರ ಯೋಗಿಕೊಳ್ಳದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಶ್ರೀ ಭ್ರಮರಾಂಭಾದೇವಿ ಪ್ರಾಣ ಪ್ರತಿಷ್ಠಾಪನೆ ಮತ್ತು ಉದ್ಘಾಟನಾ ಕಾರ್ಯಕ್ರಮವು ದಿ.26ರಿಂದ 31ರ ವರೆಗೆ ಜರುಗಲಿದೆ ಎಂದು ಶ್ರೀ ಮಲ್ಲಿಕಾರ್ಜುನ ಹಾಗೂ ಶ್ರೀ ಭ್ರಮರಾಂಭಾದೇವಿ ಅರ್ಚಕರು ತಿಳಿಸಿದ್ದಾರೆ.

ರವಿವಾರ ದಿ.26ರಂದು 9ಗಂಟೆಗೆ ನಗರದ ಶ್ರೀ ಸಿದ್ಧಿವಿನಾಯಕ ದೇವಸ್ಥಾನದಿಂದ ಮುತ್ತೈದೆಯರ ಆರತಿ, ಕುಂಭ, ವಿವಿಧ ವಾದ್ಯಗಳೊಂದಿಗೆ ಶೋಭಾಯಾತ್ರೆಯನ್ನು ಶಾಸಕ ರಮೇಶ ಜಾರಕಿಹೊಳಿ ಉದ್ಘಾಟಿಸುವರು.

ದಿ.27, 28, 29ರಂದು ಮುಂಜಾನೆ ಶ್ರೀದೇವಿಗೆ ಮೂರ್ತಿಗೆ ರುದ್ರಾಭಿಷೇಕ, ಗಣ ಹೋಮ, ಕ್ಷೀರವಾಸ, ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಜರುಗುವವು. ದಿ.30ರಂದು ಶ್ರೀದೇವಿ ಮೂರ್ತಿಗೆ ಅಭಿಷೇಕ, ನವಗ್ರಹ ಹೋಮ, ವಾಸ್ತು ಶಾಂತಿ ನಂತರ ಶ್ರೀ ಭ್ರಮರಾಂಭಾದೇವಿ ಮೂರ್ತಿಯನ್ನು ವಾದ್ಯಮೇಳದೊಂದಿಗೆ ದೇವಸ್ಥಾನಕ್ಕೆ ಪ್ರವೇಶ ಹಾಗೂ ಕಳಸಾರೋಹಣ ಜರುಗುವದು. ದಿ.31ರಂದು ಚಂಡಿಕಾ ಹೋಮ, ಕುಂಕುಮಾರ್ಚನೆ, ಶ್ರೀದೇವಿಗೆ ಪ್ರಾಣ ಪ್ರತಿಷ್ಠಾಪನೆಯನ್ನು ನರಗುಂದದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ನೇರವೇರಿಸುವರು. ಮಧ್ಯಾಹ್ನ 12ಗಂಟೆಗೆ ನಡೆಯುವ ಧರ್ಮಸಭೆಯಲ್ಲಿ ನರಗುಂದದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ನಗರದ ಮುಪ್ಪಯ್ಯನ ಮಠದ ಶ್ರೀ ರಾಚೋಟೇಶ್ವರ ಶೀವಾಚಾರ್ಯ ಮಹಾಸ್ವಾಮಿಗಳು ಹಾಗೂ ಶಾಸಕರು, ಸಂಸದರು, ವಿಧಾನ ಪರಿಷತ ಸದಸ್ಯರು ಸೇರಿದಂತೆ ಗಣ್ಯರು ಪಾಲ್ಗೊಳ್ಳಲಿದ್ದು ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀದೇವಿಯ ಕೃಪಾಶೀರ್ವಾಧಕ್ಕೆ ಪಾತ್ರರಾಗುವಂತೆ ತಿಳಿಸಿದ್ದಾರೆ.

## 35ನೇ ಗಂಗಾರಾಮೋತ್ಸವ ಹಾಗೂ ಆಜೂರ ಪುಸ್ತಕ ಪ್ರತಿಷ್ಠಾನದ ಪ್ರಶಸ್ತಿ ಪ್ರದಾನ ಸಮಾರಂಭ



ರಾಯಬಾಗ: ತಾಲೂಕಿನ ಹಿಡಕಲ್ ಗ್ರಾಮದ ವಸಂತರಾವ ಪಾಟೀಲ ಪ್ರಥಮ ದರ್ಜೆ ಮಹಾವಿದ್ಯಾಲಯದ ಪ್ರಾಚಾರ್ಯ ಹಾಗೂ ಸಾಹಿತಿ ಟಿ.ಎಸ್. ವಂಟಗೂಡಿರವರ ಸಂಪಾದಿತ "ಕನಕಾಂಬರ" ಕವನ ಸಂಕಲನವು ಅಜೂರ ಪುಸ್ತಕ ಪ್ರತಿಷ್ಠಾನದ ರಾಜ್ಯ ಪ್ರಶಸ್ತಿಗೆ ಆಯ್ಕೆಯಾಗಿದೆ.

ಜ.26 ರಂದು ಹಾರೂಗೇರಿಯ ಬಿ.ಆರ್. ಆಜೂರ ತೋಟದ ಆವರಣದಲ್ಲಿ ನಡೆಯುವ 35ನೇ ಗಂಗಾರಾಮೋತ್ಸವ ಹಾಗೂ ಆಜೂರ ಪುಸ್ತಕ ಪ್ರತಿಷ್ಠಾನದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಾಹಿತಿ ಟಿ.ಎಸ್.ವಂಟಗೂಡಿರವರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

2024ರಲ್ಲಿ ಬೆಳಗಾವಿ ಜಿಲ್ಲೆಯ ಹಲವಾರು ಕವಿಗಳು ಬರೆದಿರುವ ಸಂತ ಶ್ರೇಷ್ಠ ಕವಿ ಕನಕದಾಸರ ಕವಿತೆಗಳನ್ನು ಸಂಗ್ರಹಿಸಿ ಕನಕಾಂಬರ ಎಂಬ ಶೀರ್ಷಿಕೆ ಅಡಿಯಲ್ಲಿ ರಚಿಸಿದ ಕವನ ಸಂಕಲನವನ್ನು ಇತ್ತೀಚೆಗೆ ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹಲವಾರು ಗಣ್ಯ ಮತ್ತು ಸಾಹಿತಿಗಳ ಸಮ್ಮುಖದಲ್ಲಿ ಕೃತಿಯನ್ನು ಲೋಕಾರ್ಪಣೆ ಗೊಳಿಸಿದ್ದಾರೆ.

ಸಾಹಿತಿ ವಂಟಗೂಡಿರವರು "ರಾಯಬಾಗ ತಾಲೂಕಿನ ಹಾಲುಮತದ ದೈವಗಳು", "ಕನ್ನಡದಿಂಚರ", "ಪ್ರಭು ಕಿರಣ", "ಭೀಮ ಬೆಳಕು" ಸೇರಿ ಅನೇಕ ಕೃತಿಗಳನ್ನು ರಚಿಸಿದ್ದಾರೆ.

******

# ಅಜಾತ ಶತ್ರು ಅಟಲ್ ಜೀ ಎಲ್ಲರಿಗೂ ಮಾದರಿ -ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ



ಬೆಳಗಾವಿ.ಬಿಜೆಪಿ ಬೆಳಗಾವಿ ಗ್ರಾಮಂತರ ಜಿಲ್ಲಾ ಕಚೇರಿಯಲ್ಲಿ ಅಟಲ್ ಜೀ ಜನ್ಮ ಶತಮಾನೋತ್ಸವ ಸಮಿತಿಯ ಸಭೆಯನ್ನು ಉದ್ದೇಶಿಸಿ ಸುಭಾಷ್ ಪಾಟೀಲ ಅವರು ಮಾತನಾಡಿ ಅಜಾತಶತ್ರು ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮ ಶತಮಾನೋತ್ಸವ ವರ್ಷದ ಆಚರಣೆಗೆ ಜಿಲ್ಲಾ ತಂಡವನ್ನು ರಚಿಸಲಾಗಿದೆ ಎಂದು ವಿವರಿಸಿದರು.

ಬಹುಮುಖಿ ವ್ಯಕ್ತಿತ್ವದ ಅಟಲ್ ಜೀ ಅವರ ಜನ್ಮದಿನದ ಶತಮಾನೋತ್ಸವದ ಸಂದರ್ಭದಲ್ಲಿ ಬೂತ್, ಮಂಡಲ, ಜಿಲ್ಲೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು. ಅಟಲ್‌ಜಿ ಅವರ ಪುಸ್ತಕ, ಸಾಹಿತ್ಯಗಳ ಪ್ರದರ್ಶನ,ಭಾಷಣ ಸ್ಪರ್ಧೆ,ಕಾರ್ಯಕರ್ತರ ಸನ್ಮಾನ, ಅಟಲ್‌ಜೀ ಅವರ ಅಪಾರ ಕೊಡುಗೆಗಳ ಪ್ರದರ್ಶನ ನಡೆಯಲಿದೆ ಎಂದು ತಿಳಿಸಿದರು.

ಮಾಜಿ ಶಾಸಕ ಹಾಗೂ ಬಿಡಿಸಿಸಿ ಬ್ಯಾಂಕ ನಿರ್ದೇಶಕ maha ಫೆ. 15ರಿಂದ ಮಾರ್ಚ್ 15ರವರೆಗೆ ಜಿಲ್ಲಾ ಮಟ್ಟದಲ್ಲಿ ಅಟಲ್ ವಿರಾಸತ್ ಸಮ್ಮೇಳನ ಆಯೋಜಿಸಲಾಗುವುದು. ಅಲ್ಲಿಯೂ ಅಟಲ್‌ಜೀ ಅವರ ಬಗ್ಗೆ ಹಲವಾರು ಪುಸ್ತಕಗಳ ಪ್ರದರ್ಶನ, ಹಿರಿಯರ ಗೌರವ, ಅಟಲ್‌ಜೀ ಅವರ ಹೋರಾಟದ ದಾರಿಯಲ್ಲಿ ಬೆಳೆದುಬಂದ ವ್ಯಕ್ತಿಗಳಿಗೆ ಗೌರವ ಸಲ್ಲಿಸುತ್ತೇವೆ ಎಂದು ತಿಳಿಸಿದರು. ಅಟಲ್‌ಜೀ ಅವರು ದೇಶದ ಅಪರೂಪದ ನಾಯಕ, ಯುವಪೀಳಿಗೆ ಮತ್ತು ನಾಗರಿಕರಿಗೆ ಅವರ ಕೊಡುಗೆ-ಸಾಧನೆಯನ್ನು ಪರಿಚಯಿಸುವ ಪ್ರಯತ್ನ ಇದಾಗಿದೆ ಎಂದು ಹೇಳಿದರು. ಇದಕ್ಕಾಗಿ ಎಲ್ಲ ರೀತಿಯ ತಯಾರಿ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಈ ಸಂಬಂಧಿತ ಸಮಿತಿಯಲ್ಲಿ ಜಿಲ್ಲಾ ಸಂಚಾಲಕರಾಗಿ ಮಾಜಿ ಶಾಸಕರಾದ ಮಹಾಂತೇಶ ದೊಡ್ಡಗೌಡರ,ಸಹ ಸಂಚಾಲಕರಾಗಿ ಸಚಿನ್ ಕಡಿ, ಸುಭಾಷ್ ಸಣ್ಣವೀರಪ್ಪನವರ, ಸುನಿಲ್ ಮಡ್ಡಿಮನಿ ಅವರು ಕಾರ್ಯ ನಿರ್ವಹಿಸುವರು ಎಂದು ಹೇಳಿದರು.

ಮಾಜಿ ಶಾಸಕ ಹಾಗೂ ಬಿಡಿಸಿಸಿಬ್ಯಾಂಕ ನಿರ್ದೇಶಕ, ಅಭಿಯಾನದ ಜಿಲ್ಲಾ ಸಂಚಾಲಕ ಮಹಾಂತೇಶ ದೊಡ್ಡಗೌಡರ ಅವರು ಮಾತನಾಡಿ ದೇಶ ಕಂಡ ಸರ್ವ ಶ್ರೇಷ್ಠ ನಾಯಕರಾದಅಟಲ್ ಬಿಹಾರಿ ವಾಜಪೇಯಿ ಅವರ ಕಾರ್ಯವೈಖರಿ ಎಲ್ಲರಿಗೂ ಮಾದರಿ ಅಗಿದ್ದು ಅವರ ಸಾಧನೆ ತಿಳಿಸಲು ಜಿಲ್ಲೆಯ ಎಲ್ಲಾ ಬಿಜೆಪಿ ಮಂಡಲಗಳಲ್ಲೂ ಈ ಸಂಬಂಧ ತಂಡಗಳನ್ನು ರಚಿಸಲಾಗಿದೆ ಎಂದು ತಿಳಿಸಿದರು. ಅಟಲ್ ಜೀ ಅವರ ರಾಜ್ಯ ಪ್ರವಾಸ ಸಂಬಂಧ ಮಾಹಿತಿಯನ್ನೂ ಸಂಗ್ರಹಿಸುತ್ತಿದ್ದೇವೆ. ಫೋಟೋಗಳು, ಸ್ಮರಣಫಲಕಗಳನ್ನು ಸಂಗ್ರಹಿಸುವ ಯೋಜನೆಯೂ ಇದೆ ಎಂದು ತಿಳಿಸಿದರು. ಫೆ. 14ರಂದು ಸಂಗ್ರಹಿತ ಮಾಹಿತಿಯ ಪ್ರದರ್ಶಿನಿಯೂ ನಡೆಯುತ್ತದೆ ಎಂದರು.

ಜಿಲ್ಲೆಯ ಸಹ ಸಂಚಾಲಕರಾದ ಸಚಿನ್ ಕಡಿ,ಸುಭಾಷ್ ಸಣ್ಣವೀರಪ್ಪನವರ, ಸುನಿಲ್ ಮಡ್ಡಿಮನಿ,ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಸಂದೀಪ್ ದೇಶಪಾಂಡೆ, ಧನಶ್ರೀ ದೇಸಾಯಿ,ಜಿಲ್ಲಾ ಉಪಾಧ್ಯಕ್ಷ ವಿನಯ್ ಕದಂ, ಕೋಶಾಧ್ಯಕ್ಷ ಸಂತೋಷ ದೇಶನೂರ, ಜಿಲ್ಲಾ ಎಸ್.ಸಿ ಮೋರ್ಚಾ ಅಧ್ಯಕ್ಷ ಯಲ್ಲೇಶ್ ಕೊಲಕಾರ, ಮಾಧ್ಯಮ ಸಹ ಪ್ರಮುಖ ಬಾಳೇಶ ಚವ್ವನ್ನವರ ಹಾಗೂ ಪ್ರಮುಖ ಮುಖಂಡರು ಪದಾಧಿಕಾರಿಗಳು ಉಪಸ್ಥಿತರಿದ್ದರು ವೀರಭದ್ರ ಪೂಜಾರಿ ನಿರೂಪಿಸಿದರು ಸುಭಾಷ್ ಸಣ್ಣವೀರಪ್ಪನವರ ವಂದಿಸಿದರು.

# ಮತದಾನ: ಆಸೆ ಆಮೀಷಗಳಿಗೆ ಒಳಗಾಗಬೇಡಿ




ರಬಕವಿ-ಬನಹಟ್ಟಿ : ಮತದಾನ ನಮ್ಮೆಲ್ಲರ ಜವಾಬ್ದಾರಿ ಮತ್ತು ಅಧಿಕಾರ. ಸಾರ್ವಜನಿಕ ಚುನಾವಣೆಯಲ್ಲಿ ಮತದಾನ ಮಾಡುವ ಮೂಲಕ ಸಮರ್ಥ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು. ಯಾವುದೆ ಆಸೆ, ಆಮೀಷಗಳಿಗೆ ಒಳಗಾಗದೆ ಮತದಾನ ಮಾಡಬೇಕು. ಮತದಾನದಿಂದ ಸಮರ್ಥ ಮತ್ತು ಶ್ರೇಷ್ಠ ಭಾರತವನ್ನು ನಿರ್ಮಾಣ ಮಾಡಲು ಸಾಧ್ಯ ಎಂದು ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕ ಡಾ.ಮನೋಹರ ಶಿರಹಟ್ಟಿ ತಿಳಿಸಿದರು. ಅವರು ಶುಕ್ರವಾರ ಇಲ್ಲಿನ ತಮ್ಮಣ್ಣಪ್ಪ ಚಿಕ್ಕೋಡಿ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಮತದಾರ ದಿನಾಚರಣೆಯ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು. ಪ್ರಾಚಾರ್ಯ ಡಾ.ಜಿ.ಆರ್. ಜುನ್ನಾಯ್ಕರ್ ಮಾತನಾಡಿ, ಪ್ರಜಾಪ್ರಭುತ್ವದ ಯಶಸ್ವಿಗೆ ಮತದಾನ ಬಹಳಷ್ಟು ಮುಖ್ಯ. 18 ವರ್ಷ ಮೇಲ್ಪಟ್ಟ ಯುವಕರು ತಾವು ಕಡ್ಡಾಯವಾಗಿ ಮತದಾನ ಮಾಡುವುದರ ಜೊತೆಗೆ ಇನ್ನಿತರರು ತಪ್ಪದೆ ಮತದಾನ ಮಾಡುವಂತೆ ಜಾಗೃತಿಯನ್ನು ಮೂಡಿಸಬೇಕು ಎಂದು ತಿಳಿಸಿದರು.

ಜಮಖಂಡಿಯ ಬಿ ಎಲ್ ಡಿ ಇ ಸಂಸ್ಥೆಯ ವಾಣಿಜ್ಯ ವಿಭಾಗದ ಮುಖ್ಯಸ್ಥೆ ಡಾ. ದೀಪಾ ತಳವಾರ ಕಾರ್ಯಕ್ರಮ ಉದ್ಘಾಟಿಸಿದರು. ಡಾ. ರಮೇಶ ಮಾಗುರಿ, ಉಪನ್ಯಾಸಕರಾರದ ವಿ.ವೈ.ಪಾಟೀಲ, ಸುನಂದ ಭಜಂತ್ರಿ ಮಾತನಾಡಿದರು.

ಕಾವೇರಿ ಜಗದಾಳ, ಶ್ವೇತಾ ಮಠದ, ರತ್ನಾ ಪಾಟೀಲ, ಗಜಾನನ ತೇರದಾಳ, ಶಿವು ಇಟ್ನಾಳ, ಚಂದ್ರು ಮಾದರ, ವಿಜಯಲಕ್ಷ್ಮಿ ಮಾಚಕನೂರ, ಲಕ್ಷ್ಮಿ ಖವಾಸಿ ಸೇರಿದಂತೆ ಅನೇಕರು ಇದ್ದರು.

# ವೈಜ್ಞಾನಿಕ ಪಶುಪಾಲನಾ ತರಬೇತಿ ಕಾರ್ಯಕ್ರಮ ಸಮಾರೋಪ

ಬೆಳಗಾವಿ :ಭಾರತೀಯ ಕೃಷಿ ಅನುಸಂಧಾನ ಪರಿಷತ್ತು, ನವದೆಹಲಿಯ ಕೆಎಲ್‌ಇ-ಕೃಷಿ ವಿಜ್ಞಾನ ಕೇಂದ್ರ, ಮತ್ತಿಕೊಪ್ಪ ಹಾಗೂ ಪಶುಪಾಲನಾ ಶ್ರೇಷ್ಠತಾ ಕೇಂದ್ರ, ಹೆಸರಘಟ್ಟ, ಬೆಂಗಳೂರು ಇವರ ಸಹಯೋಗದಲ್ಲಿ ರೈತರಿಗಾಗಿ ಏರ್ಪಡಿಸಲಾಗಿದ್ದ ಮೂರು ದಿನಗಳ ಅವಧಿಯ ವೈಜ್ಞಾನಿಕ ಪಶುಪಾಲನಾ ಪದ್ಧತಿ ತರಬೇತಿ ಕಾರ್ಯಕ್ರಮವು ಸಮಾರೋಪಗೊಂಡಿತು. ತರಬೇತಿಯ ಸಮಾರೋಪ ಸಮಾರಂಭದಲ್ಲಿ ಬೆಳಗಾವಿ ಜಿಲ್ಲೆಯ ಒಟ್ಟು 40 ಹೈನುಗಾರರು ಭಾಗವಹಿಸಿದ್ದರು. ಸಮರೋಪ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಡಾ. ಹೊಳಬಸಪ್ಪ ತೆಗ್ಗಿ, ಜಂಟಿ ನಿರ್ದೇಶಕರು, ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಮಂತ್ರಾಲಯ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆ, ಪಶುಸಂಗೋಪನಾ ಶ್ರೇಷ್ಠತೆಯ ಕೇಂದ್ರ, ಬೆಂಗಳೂರು ಇವರು ಮಾತನಾಡುತ್ತ ತರಬೇತಿಯಲ್ಲಿ




ಪಡೆದ ವೈಜ್ಞಾನಿಕ ಮಾಹಿತಿಯನ್ನು ತಮ್ಮ ಪಶುಪಾಲನಾ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡು ಹೈನುಗಾರಿಕೆಯಿಂದ ಉತ್ತಮ ಲಾಭ ಪಡೆಯಲು ವಿನಂತಿಸಿದರು. ಇದಲ್ಲದೇ ಇದೇರೀತಿಯ ತರಬೇತಿಗಳನ್ನು ಮುಂದೆಯೂ ರೈತರು ಬಯಸಿದಲ್ಲಿ ಆಯೋಜಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಇನ್ನೊರ್ವ ಅತಿಥಿ ಬೆಳಗಾವಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ (ಕೆಎಮ್‌ಎಫ್) ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಶ್ರೀಕಾಂತ ವ್ಹಿ. ಎನ್. ಇವರು ಬೆಳಗಾವಿ ಜಿಲ್ಲೆಯಲ್ಲಿ ಉತ್ತಮ ಹಾಲಿನ ಇಳುವರಿ ಪಡೆಯಲು ಸಲಹೆ ನೀಡುತ್ತ ಗುಣಮಟ್ಟದ ಪಶು ಆಹಾರದ ಬಳಕೆ, ಪೋಷಕಾಂಶ ಭರಿತ ಆಹಾರ, ಜಂತು ನಿವಾರಕ ಔಷಧಿಗಳ ಬಳಕೆ ಹಾಗೂ ಅಧಿಕ ಇಳುವರಿ ಪಡೆಯಲು ಖನಿಜಾಂಶಗಳ ಬಳಕೆ, ಕೃತಕ ಗರ್ಭಧಾರಣೆ ಮುಂತಾದ ನೂತನ ತಾಂತ್ರಿಕತೆಗಳನ್ನು ಅಳವಡಿಸಬೇಕೆಂದರು. ರೈತರು ಉತ್ಪಾದಿಸುವ ಹಾಲನ್ನು ಕೆಎಮ್‌ಎಫ್ ಡೈರಿಗೆ ಒದಗಿಸುವಂತೆ ವಿನಂತಿಸಿದರು. ಇದರಿಂದ ರೈತರಿಗೆ ಹಾಗೂ ಸಂಸ್ಥೆಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು. ಸಮಾರಂಭದಲ್ಲಿ ಶಿಬಿರಾರ್ಥಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ವಿಸ್ತರಣಾ ನಿರ್ದೇಶಕರಾದ ಡಾ. ಪಿ. ಎಸ್. ಹೂಗಾರ ಇವರು ಮಾತನಾಡಿ, ಕೃಷಿ ವಿಜ್ಞಾನ ಕೇಂದ್ರದಲ್ಲಿ ದೊರೆಯುವ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು ಹಾಗೂ ಸುಧಾರಿತ ಮೇವಿನ ತಳಿಗಳ ಬೀಜಗಳು ಹಾಗೂ ಸಸಿಗಳನ್ನು ರೈತರು ಕೇಂದ್ರದಿಂದ ಪಡೆಯುವಂತೆ ಕೋರಿದರು. ಇದಲ್ಲದೆ ಕೇಂದ್ರವು ಕೆಎಮ್‌ಎಫ್ ಸಂಸ್ಥೆಯೊಂದಿಗೆ ಹಲವು ತರಬೇತಿಗಳನ್ನು ಹಮ್ಮಿಕೊಳ್ಳಲು ಉತ್ಸುಕವಾಗಿದೆ ಎಂದರು.

ಈ ಕಾರ್ಯಕ್ರಮದಲ್ಲಿ ಜಿ. ಬಿ. ವಿಶ್ವನಾಥ, ಬೇಸಾಯ ಶಾಸ್ತ್ರ ವಿಜ್ಞಾನಿ ಸ್ವಾಗತಿಸಿದರು ಹಾಗೂ ತೋಟಗಾರಿಕಾ ವಿಜ್ಞಾನಿ ಪ್ರವೀಣ ಯಡಹಳ್ಳಿ ವಂದಿಸಿದರು.

# ಕೃಷಿ ತಾಂತ್ರಿಕ ಸಪ್ತಾಹದ ಅಂಗವಾಗಿ ಎಣ್ಣೆ ಕಾಳು ಬೆಳೆಗಾರರಿಗೆ ತರಬೇತಿ ಕಾರ್ಯಕ್ರಮ

ಬೆಳಗಾವಿ :ಭಾರತೀಯ ಕೃಷಿ ಅನುಸಂಧಾನ ಪರಿಷತ್ತು, ನವದೆಹಲಿಯ ಕೆಎಲ್ಇ–ಕೃಷಿ ವಿಜ್ಞಾನ ಕೇಂದ್ರ, ಮತ್ತಿಕೊಪ್ಪ ಆವರಣದಲ್ಲಿ ಎಣ್ಣೆ ಕಾಳು ಬೆಳೆಗಾರರಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಧಾರವಾಡ ಕೃಷಿ ವಿಶ್ವವಿದ್ಯಾಲಯದ ಭಾ.ಕೃ.ಅ.ಪ–ಅಖಿಲ ಭಾರತೀಯ ಸಮನ್ವಯ ಶೇಂಗಾ ಸಂಶೋಧನಾ ಯೋಜನೆಯ ವಿಜ್ಞಾನಿಗಳು ರೈತರಿಗೆ ತರಬೇತಿ ನೀಡಿದರು. ಬೆಳಗಾವಿ ಕೆಎಲ್ಇ ಸಂಸ್ಥೆಯ ನಿರ್ದೇಶಕರು ಹಾಗೂ ಬೈಲಹೊಂಗಲದ ಮಾಜಿ ಶಾಸಕರಾದ ಡಾ. ವ್ಹಿ. ಆಯ್. ಪಾಟೀಲರವರು ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ರೈತರು ಎಣ್ಣೆ ಕಾಳು ಬೆಳೆ ಬೆಳೆಯಲು ಆಸಕ್ತಿ ತೋರಬೇಕು ಎಂದರು. ಆರೋಗ್ಯದ ದೃಷ್ಟಿಯಿಂದ ನಾವು ಸಂಸ್ಕರಿಸಿದ ಎಣ್ಣೆಯನ್ನು ಬಳಸುತ್ತಿದ್ದು ಬೆಳಗಾವಿ ಜಿಲ್ಲೆಯಲ್ಲಿ ಶೇಂಗಾ ಹಾಗೂ ಕುಸುಬೆ ಬೆಳೆಯನ್ನು ರೈತರು ಬೆಳೆಯುತ್ತಿದ್ದು ಅದನ್ನೇ ಬಳಸುತ್ತಿದ್ದರು. ಕಾಲಕ್ರಮೇಣ ಸದರಿ ಬೆಳೆಗಳು ಮಾಯವಾಗಿ ಸಂಸ್ಕರಿಸಿದ ಹಾಗೂ ಆಮದು ಮಾಡಿದ ಎಣ್ಣೆಯನ್ನು ಬಳಸುತ್ತಿದ್ದೇವೆ. ಇದರಿಂದ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದು ರೈತರು ಮತ್ತೆ ಶೇಂಗಾ, ಸೂರ್ಯಕಾಂತಿ, ಕುಸುಬೆ ಮುಂತಾದ ಬೆಳೆಗಳಿಗೆ ಆದ್ಯತೆ ನೀಡಬೇಕು ಎಂದರು. ಇದಲ್ಲದೆ ಕೃಷಿ ವಿಶ್ವವಿದ್ಯಾಲಯ, ಕೃಷಿ ವಿಜ್ಞಾನ ಕೇಂದ್ರ ಮತ್ತು ಕೃಷಿ ಇಲಾಖೆಗಳು ಗುಣಮಟ್ಟದ ಬೀಜವನ್ನು ಒದಗಿಸುವಲ್ಲಿ ಶ್ರಮಿಸಬೇಕು ಎಂದರು. ಶಿಕ್ಷಣ ಮತ್ತು ಆರೋಗ್ಯ ವಲಯದಲ್ಲಿ ಗಣನೀಯ ಸಾಧನೆ ಮಾಡಿದ ಕೆಎಲ್ಇ ಸಂಸ್ಥೆಯು ಈಗ ಕೃಷಿ ವಲಯದಲ್ಲೂ ಕಾರ್ಯತತ್ಪರವಾಗಿದ್ದು ಕೃಷಿ ವಿಜ್ಞಾನ ಕೇಂದ್ರದಂತಹ ಸಂಸ್ಥೆಯನ್ನು ಹುಟ್ಟುಹಾಕಿದ್ದು ಬೆಳಗಾವಿ ಜಿಲ್ಲೆಯ ರೈತರು ಈ ಕೇಂದ್ರದಿಂದ ತಾಂತ್ರಿಕ ಮಾಹಿತಿಯನ್ನು ಪಡೆದು ಉತ್ತಮ ಬೆಳೆ ಪಡೆದು ಆರ್ಥಿಕ ಮಟ್ಟವನ್ನು ಹೆಚ್ಚಿಸುವಲ್ಲಿ ಶ್ರಮಿಸಲು ಕೋರಿದರು. ಮಾರುಕಟ್ಟೆ ಬೆಲೆಯನ್ನು ಅವಲಂಬಿಸಿ ಒಂದೇ ಬೆಳೆಯನ್ನು ಬೆಳೆಯದೆ ಹಲವು ಬೆಳೆಗಳನ್ನು ಬೆಳೆದು ಸಮಗ್ರ ಕೃಷಿಗೆ ಒತ್ತುಕೊಟ್ಟು ಮುಂದಿನ ಆರೋಗ್ಯವನ್ನು ಕಾಪಾಡಿಕೊಂಡು ಕೃಷಿಯನ್ನು ನಿರ್ವಹಿಸಬೇಕೆಂದು ಕರೆ ನೀಡಿದರು.



ಇದೇ ಸಂದರ್ಭದಲ್ಲಿ ಕೃಷಿ ವಿಶ್ವವಿದ್ಯಾಲಯದ ಎಣ್ಣೆ ಕಾಳು ಸಂಶೋಧನಾ ಯೋಜನೆಯ ಬೇಸಾಯ ತಜ್ಞ ಡಾ. ಬಸವರಾಜ ಶಿ. ಏಣಗಿಯವರು ಶೇಂಗಾ ಬೆಳೆಯ ವಿವಿಧ ತಳಿಗಳು ಹಾಗೂ ಅವುಗಳ ನಿರ್ವಹಣೆ, ಕೀಟ ತಜ್ಞರಾದ ಡಾ. ಸಿದ್ಲಿಂಗಪ್ಪ ಹೂಗಾರ ಇವರು ಸಮಗ್ರ ಕೀಟ ನಿರ್ವಹಣೆ ಕುರಿತು ಸಸ್ಯ ರೋಗ ತಜ್ಞರಾದ ಡಾ. ಗುರುಪಾದ ಬಲ್ಲೋಳ ಇವರು ಶೇಂಗಾ ಬೆಳೆಯ ರೋಗ ನಿರ್ವಹಣೆ ಕುರಿತು ಮಾಹಿತಿ ನೀಡಿದರು. ಕೃಷಿ ಸಪ್ತಾಹದ ಅಂಗವಾಗಿ ಏರ್ಪಡಿಸಿದ ಈ ತರಬೇತಿಯಲ್ಲಿ ಒಟ್ಟು 40 ರೈತರು ಭಾಗವಹಿಸಿದ್ದು ಕೃಷಿ ವಿಜ್ಞಾನ ಕೇಂದ್ರದ ಶೈಕ್ಷಣಿಕ ಕ್ಷೇತ್ರಗಳಿಗೂ ಭೇಟಿ ನೀಡಿ ಮಾಹಿತಿ ವಿನಿಮಯ ಮಾಡಿಕೊಂಡರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮತ್ತಿಕೊಪ್ಪದ ಕೆ–ಎಲ್ಇ ಕೆವಿಕೆ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥ ಡಾ. ಮಂಜುನಾಥ ಚೌರಡ್ಡಿ ವಹಿಸಿ ಮಾತನಾಡಿ, ಬೆಳಗಾವಿ ಜಿಲ್ಲೆಯ ರೈತರು ಕೇಂದ್ರದೊಂದಿಗೆ ಸಂಪರ್ಕದಲ್ಲಿದ್ದು ಗುಣಮಟ್ಟದ ಬೀಜ, ಜೈವಿಕ ಪರಿಕರಗಳು ಹಾಗೂ ಮಣ್ಣು ಮತ್ತು ನೀರು ಪರೀಕ್ಷೆಗಾಗಿ ಸಂಪರ್ಕಿಸುವಂತೆ ಕೋ–ರಿದರು. ಕಾರ್ಯಕ್ರಮದಲ್ಲಿ ಬೇಸಾಯ ತಜ್ಞರಾದ ಶ್ರೀ. ಜಿ. ಬಿ. ವಿಶ್ವನಾಥ ಇವರು ಸ್ವಾಗತಿಸಿದ ಕಾರ್ಯಕ್ರಮದಲ್ಲಿ ತೋಟಗಾ–ರಿಕಾ ತಜ್ಞ ಶ್ರೀ ಪ್ರವೀಣ ಯಡಹಳ್ಳಿ ಇವರು ವಂದಿಸಿದರು. ಅಲ್ಲದೇ ಮೂರನೇ ದಿನದ ಕೃಷಿ ತಂತ್ರಜ್ಞಾನ ಸಪ್ತಾಹದ ಅಂಗವಾಗಿ ವೈಜ್ಞಾನಿಕ ಪಶುಪಾಲನಾ ಪದ್ಧತಿ ತರಬೇತಿ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರ ಗದಗದ ಪಶು ಸಂಗೋಪನಾ ವಿಜ್ಞಾನಿಗಳಾದ ಡಾ. ಬಸವರಾಜ ಮುರಗೋಡರವರು ಜಾನುವಾರುಗಳ ಸಾಕಾಣಿಕೆ ಮತ್ತು ನಿರ್ವಹಣೆ ಕುರಿತು ಹೈನುಗಾರಿಕೆ, ಕುರಿ ಮತ್ತು ಆಡು ಹಾಗೂ ಕೋಳಿ ಸಾಕಾಣಿಕಾ ರೈತರಿಗೆ ಮಾಹಿತಿ ನೀಡಿದರು. ಈ ತರಬೇತಿಯಲ್ಲಿ ಬೆಳಗಾವಿ ಜಿಲ್ಲೆಯ 40 ರೈತರು ಭಾಗವಹಿಸಿ ಸದುಪಯೋಗ ಪಡೆದುಕೊಂಡರು.

# ಸಂಕೋನಹಟ್ಟಿ ಗ್ರಾ.ಪಂ.ಅಧ್ಯಕ್ಷರ ಅಧಿಕಾರ ಸ್ವೀಕಾರ



ಮೋಳೆ ;– ಅಥಣಿ ಗ್ರಾಮೀಣ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ರಸ್ತೆ, ಕುಡಿಯುವ ನೀರು, ಬೀದಿ ದೀಪ, ಸ್ವಚ್ಛತೆ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಮಾಜಿ ಡಿಸಿಎಮ್, ಶಾಸಕ ಲಕ್ಷ್ಮಣ ಸವದಿ ಮಾರ್ಗದರ್ಶನದಲ್ಲಿ ಒದಗಿಸುವುದಾಗಿ ಶಂಕರ ಗಡದೆ ಹೇಳಿದರು. ಅವರು ಅಥಣಿ ಗ್ರಾಮೀಣ ಗ್ರಾಮ ಪಂಚಾಯತನ ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಯಾಗಿ ಶುಕ್ರವಾರ ಕಛೇರಿಯಲ್ಲಿ ಅಧಿಕಾರ ಸ್ವೀಕರಿಸಿ ಮಾತನಾಡುತ್ತಿದ್ದರು.

ರಾಜ್ಯದಲ್ಲಿಯೇ ಅತೀ ದೊಡ್ಡ ಗ್ರಾಮ ಪಂಚಾಯತ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿರುವ ಅಥಣಿ ಗ್ರಾಮೀಣ ಪಂಚಾಯತಗೆ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿರುವುದು ನನಗೆ ಸಂತಸ ತಂದಿದೆ ಎಂದ ಅವರು ನನ್ನ ಆಯ್ಕೆಗೆ ಸಹಕಾರ ನೀಡಿದ ಯುವ ಧುರೀಣ ಚಿದಾನಂದ ಸವದಿ ಹಾಗೂ ಮುಖಂಡರನ್ನು ಅಭಿನಂದಿಸಿದರು.

ಅಧಿಕಾರ ಸ್ವೀಕಾರಕ್ಕಿಂತ ಮೊದಲು ಶಂಕರ ಗಡದೆ ಇವರನ್ನು ಗ್ರಾಮ ಪಂಚಾಯತ ಸದಸ್ಯರು, ಮುಖಂಡರು ಸತ್ಕರಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಶಿವಾನಂದ ನಾಯಿಕ, ಧರಮು ಹಲ್ಯಾಳೆ, ರಾವಸಾಹೇಬ ನಾಯಿಕ, ಉಪಾಧ್ಯಕ್ಷೆ ರೂಪಾ ಸೋನಕರ, ಪರಶುರಾಮ ಪೋಳ, ಜಯಶ್ರೀ ಆಲಬಾಳ, ಸುನೀಲ ಅಪರಾಜ, ಜಗದೀಶ ಕಿವಡಿ, ಪುಟ್ಟು ಶಿಂದೆ, ಅನೀಲ ನರೋಡೆ, ಸುವರ್ಣಾ ಸಾಳುಂಕೆ, ಅರುಣ ಭಾಸಿಂಗಿ, ಅಪ್ಪಾಸಾಬ ಕೋ–ರಿಶೆಟ್ಟಿ, ರಾಜೇಶ್ವರಿ ವಣಜೋಳಿ, ಪರಶುರಾಮ ಸೋನಕರ, ಹಣಮಂತ ಭಜಂತ್ರಿ, ಸವೀತಾ ಕಲಾಟೆ, ಪ್ರಭಾಕರ ಚಮಕೇರಿ, ಜಯಶ್ರೀ ಮಾನೆ, ಅಮೀನಾ ಜಮಾದಾರ, ಮೈಬುಬ ಮಕಾನದಾರ, ಸಂಜಯ ಹಣಮಾಪುರೆ, ಸಾವಿತ್ರಿ ಗುಬಚಿ, ಪರಮಾನಂದ ನಾಯಿಕ, ಗುಣವಂತಿ ಶಿರಗುಪ್ಪಿ, ಭರತೇಶ ನಾಯಿಕ, ಸುಜಾತಾ ನಾಯಿಕ, ಸಂಗಪ್ಪ ಧರಿಗೌಡ, ಸಂಗೀತಾ ನಂದಿವಾಲೆ, ಜಯಶ್ರೀ ಮುಗುಳಖೋಡ, ಮೀನಾಕ್ಷಿ ಇಂಗಳಗಾಂವಿ, ಬಿಯಾಮಾ ನದಾಫ, ಅಶೋಕ ಕೌಜಲಗಿ, ಶೋಭಾ ಬಸರಿಖೋಡಿ, ಸಂಗೀತಾ ಆಚ–ರಟ್ಟಿ, ಸಂಗೀತಾ ಕರಬಸಪ್ಪಗೋಳ, ಗೀತಾ ಬೆಳ್ಳಂಕಿ, ಗೋಪಾಲ ಅಸ್ಕಿ, ಮಹಾಂತೇಶ ಸಿಂದೂರ, ಜಯಶ್ರೀ ಅಲಬಾಳ, ಸುಧಾ ದೀವಾನಮಳ, ರಮ್ಯಾ ಮಾನೆ, ಆಕಾಶ ಬುಟಾಳೆ, ಮಹಾಂತೇಶ ಕೋರಿ, ರೇಣುಕಾ ಲಗಳಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# 5 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಕಾರ್ಯಾಲಯ ಉದ್ಘಾಟನೆ



ಮುದ್ದೇಬಿಹಾಳ ; ನಿಜವಾದ ಕನ್ನಡಿಗರು ನಾಡು ನುಡಿ ನೆಲ ಜಲಕ್ಕಾಗಿ ಟೊಂಕ್ ಕಟ್ಟಿ ನಿಲ್ಲುತ್ತಾರೆ ಹಳೆ ಬೇರು ಹೊಸ ಚಿಗರು ಕೂಡಿರಲು ಹೊಸ ಸೂಬಗು ಎಂಬಂತೆ ತಾಲೂಕಿನ ಹಿರಿಯರ ಮಾರ್ಗದರ್ಶನದಲ್ಲಿ ಕನ್ನಡದ ತೇರನ್ನು ಎಲ್ಲರೂ ಸೇರಿ ಎಳೆಯೋಣವೆಂದು ಕುಂಟೋಜಿ ಭಾವೈಕ್ಯಮಠದ ಶ್ರೀ ಚೆನ್ನವೀರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು ಶುಕ್ರವಾರ ಪಟ್ಟಣದ ವಿಬಿಸಿ ಹೈಸ್ಕೂಲ್ ಗಣಿತ ಲೋಕದ ಕೊಠಡಿಯಲ್ಲಿ ಮುದ್ದೇಬಿಹಾಳ ಕಸಾಪದ 5 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಕಾರ್ಯಾಲಯ ಉದ್ಘಾಟಿಸಿ ಅವರು ಮಾತನಾಡಿದರು ಇದು ಕನ್ನಡಿಗರ ಹಬ್ಬವಾಗಿದೆ ಈ ಸಮ್ಮೇಳನದಲ್ಲಿ ನಿರ್ಲಕ್ಷಿತ ಸಾಹಿತಿಗಳಿಗೆ ಮಹಿಳಾ ಕವಿಯತ್ರಿಗೆ ಹೆಚ್ಚಿನ ಆದ್ಯತೆ ನೀಡಿ ಎಂದ ಅವರು ಸಮ್ಮೇಳದ ಸರ್ವಾಧ್ಯಕರ ಆಯ್ಕೆ ಎಲ್ಲಾ ಮಾನದಂಡಗಳ ಪರಿಗಣಿಸಿ ಮಾಡಲಾಗುತ್ತದೆ ಏನೆ ಮಾಡಿದರು ಅದನ್ನು ಜಿಲ್ಲೆಯವರು ಪೈನಲ್ ಮಾಡುತ್ತಾರೆ ಕಾರ್ಡಿನಲ್ಲಿ ನನ್ನ ಹೆಸರು ಇಲ್ಲಾ ವೇದಿಕೆಯ ಮೇಲೆ ನಾ ಕುಳಿತಿಲ್ಲವೆಂಬ ಸಂಕುಚಿತ ಬಿಡಿ ಮೇಲೆ ಕುಳಿತವರಿಗಿಂತ ಕೆಳಗೆ ಕುಳಿತವರು ದೂಡ್ಡವರಾಗುತ್ತಾರೆ ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ ಯುವ ತರುಣರಾಗಿದ್ದು ಅವರಲ್ಲಿ ಸಂಘಟಿತ ಮನೋಭಾವವಿದೆ ಅವ–ರಿಗೆ ಎಲ್ಲಾ ಬೆನ್ನೆಲುಬಾಗಿ ಸಮ್ಮೇಳನ ಯಶಸ್ವಿಗೂಳಿಸೋಣವೆಂದರು.

ತಾಲೂಕ ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ 5 ನೇ ಸಾಹಿತ್ಯ ಸಮ್ಮೇಳನದ ವೇದಿಕೆಯ ಮೇಲೆ ಸಾಹಿತಿಗಳನ್ನು ರಾರಾಜಿಸುವ ಕೆಲಸವನ್ನು ಎಲ್ಲರೂ ಸೇರಿ ಮಾಡೋಣ ಎಲ್ಲಾ ಹಿರಿಯರ ಮತ್ತು ಎಲ್ಲಾ ಸಾಹಿತಿಗಳ ಮಾರ್ಗದರ್ಶನ ನೀಡಿ ಮತ್ತು ಒಂದು ದಿನದ ಸಾಹಿತ್ಯ ಸಮ್ಮೇಳನದಲ್ಲಿ ಎಷ್ಟು ಅವಕಾಶ ನೀಡಲು ಸಾಧ್ಯತೆವಿದೆ ಅಷ್ಟು ನೀಡುತ್ತೇನೆ ಎಲ್ಲ–ರಿಗೂ ನೀಡಲು ಆಗುವುದಿಲ್ಲವೆಂಬದನ್ನು ಎಲ್ಲಾ ಅರಿಯಬೇಕು ವಿಜಯಪುರ ಜಿಲ್ಲೆಯಲ್ಲಿ ಅತಿಹೆಚ್ಚು ಸಾಹಿತಿಗಳು ಇರುವುದು ಮುದ್ದೇಬಿಹಾಳ ತಾಲ್ಲೂಕಿನಲ್ಲಿದ್ದಾರೆಂದರು.

ಈ ವೇಳೆ ಗಣ್ಯರಾದ ಕಾಂಗ್ರೆಸ್ ಮುಖಂಡ, ಗುತ್ತಿಗೆದಾರ ಸಿ.ಬಿ ಅಸ್ಕಿ ,ಎಂ ಬಿ ನಾವದಗಿ , ಎಂ ಎಂ ಬೆನಗಲ್ ,ಚಂದ್ರಶೇಖರ ಇಟಗಿ,ಎಸ್ ಬಿ ಚಲವಾದಿ, ಸಂಗೀತ ನಾಡಗೌಡ , ಸತೀಶ ಓಸ್ವಾಲ್, ಸುಮಲತಾ ಗಡಿಯಪ್ಪನವರ, ಅಂಬಿಕಾ ಕರಪ್ಪಗೂಳ, ರುದ್ರೇಶ ಕಿತ್ತೂರು, ಬಿ.ಎಸ್ ಮುದ್ನೂರ, ಸಿದ್ದರಾಮಯ್ಯ ಜಿಗಜಿವಣ–ಗಿಮಠ, ಎಂ ಹೆಚ್ ಹಾಲ್ಯಾಳ,ಐ ಬಿ ಹಿರೇಮಠ, ಶಂಕರ ಬೇವಿನಗಿಡದ, ಬಿ ಎಸ್ ಮೇಟಿ ಮಾತನಾಡಿ ಸಮ್ಮೇಳನ ಯಶಸ್ವಿಗೆ ತನು ಮದ ಧನದ ಜೊತೆಗೆ ಕನ್ನಡತಾಯಿ ಭುವನೇಶ್ವರಿಯ ಸೇವೆಯ ಸದವಕಾಶವನ್ನು ಬಳಸಿಕೊಂಡು ರಾಜ್ಯದಲ್ಲಿ ಮಾದರಿಯ ಸಮ್ಮೇಳನ ಮಾಡಲು ಪಣತೋಡಬೇಕಿದೆ ಎಂದು ಅನೇಕ ಸಲಹೆ ಸೂಚನೆಗಳನ್ನು ನೀಡಿದರು.

ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ, ಗಣ್ಯರಾದ ಬಸನಗೌಡ ಪಾಟೀಲ, ಸಿ.ಎಲ್ ಬಿರಾದಾರ ಗುರಲಿಂಗಪ್ಪ ರಕ್ಕಸಗಿ, ಸರಸ್ವತಿ ಪೀರಾಪೂರ, ಎಲ್ ಎನ್ ನಾಯ್ಕೂಡಿ, ಯಲ್ಲಪ್ಪ ನಾಯಕಮಕ್ಕಳ, ರಾಜು ಕರಡ್ಡಿ, ಪ್ರಭುದೇವ ಕಲಬುರಗಿ, ರಾಜೇಂದ್ರ ಭೋಸಲೆ ,ವೈ ಹೆಚ್ ವಿಜಯಕರ, ಸೇರಿದಂತೆ ಅನೇಕ ಗಣ್ಯರು ಪಟ್ಟಣದ ಸಾಹಿತಿಗಳು ಕನ್ನಡಪರ ಸಂಘಟನೆ ಪದಾಧಿಕಾರಿಗಳು ಸಮ್ಮೇಳನದ ವಿವಿಧ ಸಮಿತಿಯ ಸದಸ್ಯರು ಭಾಗವಹಿಸಿದ್ದರು ಸಿದ್ದನಗೌಡ ಬಿಜ್ಜೂರ ಸ್ವಾಗತಿಸಿದರು, ದೀಪರತ್ನಶ್ರೀ ಪ್ರಾರ್ಥಿಸಿದರು, ಬಸವರಾಜ ಕೋರಿ ನಿರೂಪಿಸಿದರು ಶ್ರೀಶೈಲ ಹೂಗಾರ ವಂದಿಸಿದರು.

*******

# ದರಪಟ್ಟಿ ಆಹ್ವಾನ

ಗದಗ: ಗದಗ ಜಿಲ್ಲಾ ಪಂಚಾಯತ್ ಅನಿರ್ಭಂಧಿತ ಅನುದಾನದಡಿಯಲ್ಲಿ ಲಕ್ಷೆ?ಮೇಶ್ವರ ತಾಲೂಕಾ ಆಸ್ಪತ್ರೆಗೆ 09 ನಂ.– ಸ್ಟೀಲ್ ಕಾಟ್ ಹಾಗೂ 10 ನಂ. ತ್ರಿಸೀಟರ್ ವಿಸಿರ್ಸ್ ಕುರ್ಚಿಗಳನ್ನು ( ಏರ್ ಪೋರ್ಟ ಚೇರ್ ) ಪೂರೈಸಲು ಅರ್ಹ ಸರಬರಾಜುದಾರ–ರಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಪೂರೈಕೆದಾರರು ಜನೆವರಿ 31 ರ ಮಧ್ಯಾಹ್ನ 3 ಗಂಟೆಯೊಳಗಾಗಿ (ರಜೆ ದಿನಗಳನ್ನು ಹೊರತುಪಡಿಸಿ) ದರಪಟ್ಟಿಯನ್ನು ಸಲ್ಲಿಸತಕ್ಕದ್ದು. ದರ ನಮೂದಿಸುವಾಗ ಸಾಗಾಣಿಕೆ ವೆಚ್ಚ ಹಾಗೂ ತೆರಿಗೆ ಒಳಗೊಂಡಂತೆ ದರವನ್ನು ನಮೂದಿಸಬೇಕು. ದರಪಟ್ಟಿಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಗದಗ ಇವರ ಹೆಸರಿನಲ್ಲಿ ನೀಡತಕ್ಕದ್ದು . ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಪಂಚಾಯತಿಯ ಮುಖ್ಯ ಯೋಜನಾಧಿಕಾರಿಗಳ ಮೊಬೈಲ್ ನಂಬರ್ 9480865004 ನ್ನು ಸಂಪರ್ಕಿಸಬಹುದಾಗಿದೆ.

## ಗದಗ ಬೆಟಗೇರಿ ವಕ್ಫ್ ಸಂಸ್ಥೆಯ ಚುನಾವಣೆ ಸಾಮಾನ್ಯ ಸದಸ್ಯರ ನೋಂದಣಿಗೆ ಅಧಿಸೂಚನೆ

ಗದಗ : ಗದಗ ಬೆಟಗೇರಿ ಶಹರದ ಜನತೆಗೆ ತಿಳಿಯಪಡಿಸುವುದೇನೆಂದರೆ ಅಂಜುಮನ್ ಎ ಇಸ್ಲಾಂ ಗದಗ –ಬೆಟಗೇರಿ ವಕ್ಫ್ ಸಂಸ್ಥೆಯ ಚುನಾವಣೆಯ ಪ್ರಯುಕ್ತ ಸಾಮಾನ್ಯ ಸದಸ್ಯರ ನೊಂದಣಿಗಾಗಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಸದರಿ ಅಧಿಸೂಚನೆಯಂತೆ ಸಾಮಾನ್ಯ ಸದಸ್ಯರ ನೋಂದಣಿಯ ಅರ್ಜಿಯನ್ನು ಸಲ್ಲಿಸಲು ಅಂಜುಮನ್ ಎ ಇಸ್ಲಾಂ ಕಚೇರಿ, ಮಸ್ಜಿದ್ ಎ ಆಯೇಶಾ ಆಶ್ರಯಾ ಕಾಲೋನಿ, ಎಸ್. ಎಂ. ಕೃಷ್ಣ ನಗರ, ಗದಗ ಬೆಟಗೇರಿಯಲ್ಲಿ ಜನೆವರಿ 27 ರಿಂದ ಫೆಬ್ರುವರಿ 20 ರವರೆಗೆ ಕಾಲಾವಕಾಶ ನೀಡಲಾಗಿದೆ. ಅರ್ಜಿ ಶುಲ್ಕ 250 ಇರುತ್ತದೆ ಎಂದು ಗದಗ ಬೆಟಗೇ–ರಿಯ ಅಂಜುಮನ್ ಎ ಇಸ್ಲಾಂ ಚುನಾವಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೊಬೈಲ್ ಕ್ಯಾಂಟಿನ್ : ಸಹಾಯಧನಕ್ಕಾಗಿ ಅರ್ಜಿ

ಬಾಗಲಕೋಟೆ : ಪ್ರಸಕ್ತ ಸಾಲಿನಲ್ಲಿ ಎಸ್.ಸಿ.ಎಸ್.ಪಿ, ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ಉದ್ಯಮಿದಾರರನ್ನು ಉತ್ತೇಜಿಸಲು ಪ್ರವಾಸೋದ್ಯಮ ಹಾಗೂ ಆತಿಥ–್ಯ ಕ್ಷೇತ್ರದಲ್ಲಿ ಇಟಣಡಿಜಠಿಡಿಜಟಿಜಣಾಥಿಖ ಕಡಿಠಿಠಡಿಚಿಟ (ಇಕ) ವಿಷಯದ ಬಗ್ಗೆ ಒಂದು ತಿಂಗಳ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡಿ, ತರಬೇತಿ ಪಡೆದ ಅಭ್ಯರ್ಥಿಗಳಿಗೆ ಮೊಬೈಲ್ ಕ್ಯಾಂಟೀನ್ ವಾಹನ ಖರೀದಿಸಲು ಇಲಾಖೆಯ ಸಹಾಯಧನ ಘಟಕ ವೆಚ್ಚದಲ್ಲಿ ಶೇ.7% ರಷ್ಟು ಗರಿಷ್ಟ ರೂ.5.00 ಲಕ್ಷಗಳನ್ನು ನೀಡಲು ಉದ್ದೇಶಿಸಲಾಗಿರುತ್ತದೆ.

ತರಬೇತಿ ಹಾಗೂ ಸಹಾಯಧನಕ್ಕಾಗಿ ಜಿಲ್ಲೆಯ ಪರಿಶಿಷ್ಟ ಜಾತಿಯ 4 ಅಭ್ಯರ್ಥಿಗಳಿಗೆ ಹಾಗೂ ಪರಿಶಿಷ್ಟ ಪಂಗಡದ 2 ಅಭ್ಯರ್ಥಿಗಳ ಗುರಿಯನ್ನು ಪ್ರಸ್ತುತ ಸಾಲಿನಲ್ಲಿ ನಿಗದಿಪಡಿಸಿದೆ. ಸದರಿ ತರಬೇತಿಯನ್ನು ವಸತಿಸಹಿತ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಆತಿಥ್ಯ ಕ್ಷೇತ್ರದ ಸಂಸ್ಥೆಗಳ ಮೂಲಕ ಕಾರ್ಯಕ್ರಮವನ್ನು ಜಾರಿಗೊಳಿಸಲು ಸಹ ಉದ್ದೇಶಿಸಲಾಗಿರುತ್ತದೆ. ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಫೆ.01ರೊಳಗಾಗಿ ಉಪನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ, ಕೊಠಡಿ ಸಂಖ್ಯೆ 137, ಜಿಲ್ಲಾಡಳಿತ ಭವನ ನವನಗರ, ಬಾಗಲಕೋಟೆ ಇಲ್ಲಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08354235709 ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ಸಾವಿರಾರು ಭಕ್ತರ ಮಧ್ಯ ರಾಮಕೃಷ್ಣ ಮಹಾರಾಜರ ಅಂತಿಮ ಯಾತ್ರೆ



ರಬಕವಿ–ಬನಹಟ್ಟಿ: ಕಳೆದ ಗುರುವಾರ ಮಧ್ಯಾಹ್ನ ಮೃತರಾಗಿದ್ದ ಯಲ್ಲಟ್ಟಿಯ ನರಸಿಂಹೇಶ್ವರ ಆಧ್ಯಾತ್ಮ ಆಶ್ರಮದ ಸ.ಸ. ರಾಮಕೃಷ್ಣ ಮಹಾರಾಜ(93)ರ ಅಂತಿಮ ಯಾತ್ರೆಯು ಶುಕ್ರವಾರ ಬೆಳಿಗ್ಗೆ ಸಾವಿರಾರು ಭಕ್ತರ ಮಧ್ಯೆ ನಡೆಯಿತು.

ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯೊಂದಿಗೆ ಪಷ್ಪಾರ್ಪಣೆ ಮೂಲಕ ಅಂತಿಮ ನಮನ ಸಲ್ಲಿಸಲಾಯಿತು. ಅಲ್ಲಲ್ಲಿ ಭಕ್ತರು ಜೆಸಿಬಿ ಯಂತ್ರಗಳ ಸಹಾಯದಿಂದ ಎತ್ತರದಿಂದ ಹೂ ಚೆಲ್ಲುವದರ ಮೂಲಕ ಮಹಾರಾಜರ ಕೊನೆಯ ಬೀಳ್ಕೊಡುಗೆಯೊಂದಿಗೆ ಅಂತಿಮ ನಮನ ಸಲ್ಲಿಸಿದರು.

ಇಂಚಗೇರಿ ಸಂಪ್ರದಾಯ ಹೊಂದಿದ್ದ ಆಶ್ರಮದ ಪರಂಪರೆಗೆ ಇಂಚಗೇರಿಯ ಮಹಾರಾಷ್ಟ್ರ ಹಾಗು ಕರ್ನಾಟಕದ ಬಹುತೇಕ ಕಡೆಗಳಿಂದ ಸಂತರು, ಮಹಾರಾಜರು ಅಂತ್ಯಸಂಸ್ಕಾರದಲ್ಲಿ ಭಾಗವಹಿಸಿದ್ದರು.

******

# ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ ನೀಡಿ



ರಬಕವಿ–ಬನಹಟ್ಟಿ,ಜ24: ಇಂದಿನ ದಿನಗಳಲ್ಲಿ ಹೆಣ್ಣು ಮಕ್ಕಳಿಗೂ ಉನ್ನತ ಶಿಕ್ಷಣ ನೀಡುವತ್ತ ಪಾಲಕರು ಗಮನ ನೀಡಬೇಕು. ಮಹಿಳೆಯರು ಕೂಡಾ ಇಂದಿನ ದಿನಗಳಲ್ಲಿ ಉನ್ನತ ಸ್ಥಾನಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಉನ್ನತ ಶಿಕ್ಷಣದಿಂದ ಶ್ರೇಷ್ಠ ಸ್ಥಾನಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂದು ಇಲ್ಲಿನ ಸದಾಶಿವ ನಗರದ ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಪಿ.ಬಿ.ಆಲಗೂರ ತಿಳಿಸಿದರು.


ಅವರು ಶುಕ್ರವಾರ ಸದಾಶಿವ ನಗರದ ಪ್ರಾಥಮಿಕ ಶಾಲೆಯಲ್ಲಿ ಹನಗಂಡಿ ಗ್ರಾಮದ ಬಹುತ್ವ ಭಾರತ ಫೌಂಡೇಶನ್ ಆಶ್ರಯದಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡಿದರು.

ಶಿಕ್ಷಕ ಚಿರಂಜೀವಿ ರೋಡಕರ್ ಮಾತನಾಡಿ, ನಮ್ಮ ಸಂವಿಧಾನ ಎಲ್ಲ ರಂಗಗಳಲ್ಲಿಯೂ ಹೆಣ್ಣು ಮಕ್ಕಳಿಗೆ ಸಮಾನ ಅವಕಾಶಗಳನ್ನು ನೀಡಿದೆ. ಹೆಣ್ಣು ಮಕ್ಕಳ ಸುರಕ್ಷತೆ ಬಹಳಷ್ಟು ಮುಖ್ಯವಾಗಿದೆ. ಮಹಿಳೆಯರನ್ನು ಗೌರವಿಸುವುದರ ಜೊತೆಗೆ ಅವರನ್ನು ಪ್ರತಿಯೊಬ್ಬರು ಪ್ರೋತ್ಸಾಹಿಸಬೇಕು ಎಂದರು.

ಶಿಕ್ಷಕರಾದ ಎಸ್.ವಿ. ಕೌಜಲಗಿ, ಎನ್. ಎಂ. ಹುನಶ್ಯಾಳ, ವಿ.ಬಿ. ಸಿಂದ್ಯೆ ಎಸ್.ಎನ್.ಪೋಳ, ವಿ.ಸಿ.ಕೊಷ್ಟಿ ಇದ್ದರು. ಶಾಲೆಯ ವಿದ್ಯಾರ್ಥಿನಿಯರಿಗೆ ಕೈಗೆ ಗುಲಾಬಿ ರಿಬ್ಬನ್ ಕಟ್ಟಿ, ಸಿಹಿ ಹಂಚಲಾಯಿತು.

# ದಾನಿಗೊಂಡ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಕಾರ್ಯಕ್ರಮ

## ಸಾಧನೆಗೆ ಛಲದ ಜತೆಗೆ ಪರಿಶ್ರಮ ಇರಲಿ–ಎಸಿ ಶ್ವೇತಾ



ತೇರದಾಳ–ಬದುಕಿನಲ್ಲಿ ಸಾಧನೆಗೆ ಬರಿ ಕನಸು ಕಂಡರೆ ಸಾಲದು. ಬದಲಾಗಿ ಅದನ್ನು ಈಡೇರಿಸಲು ನಿರಂತರ ಪರಿಶ್ರಮದ ಜತೆಗೆ ಶಿಸ್ತನ್ನು ಅಳವಡಿಸಿಕೊಳ್ಳಬೇಕೆಂದು ಜಮಖಂಡಿ ಉಪವಿಭಾಗಾಧಿಕಾರಿ ಶ್ವೇತಾ ಬೀಡಕರ ಹೇಳಿದರು.

ಇಲ್ಲಿನ ಪ್ರತಿಷ್ಠಿತ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಯ ದಾನಿಗೊಂಡ ವಾಣಿಜ್ಯ ಮಹಾವಿದ್ಯಾಲಯದಲ್ಲಿ ದ್ವಿತೀಯ ಪಿಯು ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದಲ್ಲಿ ಮಾತನಾಡಿದರು.

ಜಗತ್ತು ಬಹಳಷ್ಟು ಮುಂದುವರೆದಿದೆ. ಆ ದಿಸೆಯಲ್ಲಿ ವಿದ್ಯಾರ್ಥಿಗಳು ಸಾಧನೆಯ ಬಗ್ಗೆ ಹಜ್ಜೆ ಇಡಬೇಕು. ಅವಕಾಶ ದೊರೆತಾಗ ಅದನ್ನು ಸದುಪಯೋಗ ಪಡೆದುಕೊಳ್ಳುವ ಜ್ಞಾನ ಹೊಂದಿರುಬೇಕೆಂದು ಹೇಳಿದರು. ಡಾ. ರಾಜೇಶ್ವರಿ ಮಠದ ಮಾತನಾಡಿ, ನಿಮ್ಮ ಕೌಶ್ಯಲದ ಮೇಲೆ ನಿಮ್ಮ ಯಶಸ್ಸು ಬಲಾಢ್ಯಗೊಳ್ಳುತ್ತದೆ. ವಾಣಿಜ್ಯ ವಿಭಾಗದಲ್ಲಿ ಬದುಕಿನ ನೆಲೆ ಕಟ್ಟಿಕೊಳ್ಳಲು ಸಾಕಷ್ಟು ಅವಕಾಶಗಳಿದ್ದು, ಅವುಗಳನ್ನು ಸರಿಯಾದ ಮಾರ್ಗದಲ್ಲಿ ಹುಡುಕೊಳ್ಳಬೇಕೆಂದು ಸಲಹೆ ನೀಡಿದರು. ಸಂಸ್ಥೆ ವ್ಯವಸ್ಥಾಪಕ ಡಾ. ಪುಷ್ಪದಂತ ದಾನಿಗೊಂಡ ಮಾತನಾಡಿದರು. ಕಾಲೇಜಿನ ಪ್ರಾಚಾರ್ಯ ಡಾ. ಸಂತೋಷ ಕೃಷ್ಣಾಪುರೆ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾರ್ಥಿನಿಯರಾದ ಶ್ರೇಯಾ ಹೂವನ್ನವರ, ಪ್ರಕೃತಿ ದಡ್ಡೆ ಅಭಿಪ್ರಾಯ ಹಂಚಿಕೊಂಡರು. ರಂಜಿತಾ, ಪೂರ್ಣಿಮಾ, ಬಿ.ಎಸ್. ನೇಗಿನಾಳ, ಪಿ.ಬಿ. ಮಾಳಿ, ಹರ್ಷಾ ಹರವಿ, ಅಕ್ಷತಾ ಬಾನಿ ಇನ್ನಿತರಿದ್ದರು.

## ಹೆಣ್ಣು ಮಕ್ಕಳ ಜನ್ಮದಿನಾಚರಣೆ–ಹೊಸ ಬಟ್ಟೆ ವಿತರಣೆ–ಪ್ರತಿಭಾನ್ವಿತರಿಗೆ ಸನ್ಮಾನ

# ಸಮಾಜದಲ್ಲಿ ಲಿಂಗ ತಾರತಮ್ಯ ಮನೋಧರ್ಮ ಬದಲಾಗಬೇಕು–ಜಿಲ್ಲಾಧಿಕಾರಿ

ಹಾವೇರಿ: ಸಮಾಜದಲ್ಲಿ ಲಿಂಗ ಅಸಮಾನತೆಯ ಮನೋಧರ್ಮ ಬದಲಾಗಬೇಕು. ಗಂಡು–ಹೆಣ್ಣು ಎಂಬ ಬೇದಭಾವ ಮಾಡದೇ ಇಬ್ಬರನ್ನು ಸಮಾನವಾಗಿ ಕಾಣಬೇಕು. ಹೆಣ್ಣು ಮಕ್ಕಳಿಗೆ ಪ್ರೀತಿ ಹಾಗೂ ಗೌರವ ನೀಡುವ ಮೂಲಕ ಲಿಂಗಾನುಪಾತದ ವ್ಯತ್ಯಯ ತೊಡೆದು ಹಾಕಲು ಎಲ್ಲರೂ ಶ್ರಮಿಸೋಣ ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆ ಸಹಯೋಗದಲ್ಲಿ "ಮಗಳನ್ನು ಉಳಿಸಿ ಮಗಳನ್ನು ಓದಿಸಿ" (ಬೇಟಿ ಬಚಾವೋ ಬೇಟಿ ಪಡಾವೋ)ಯೋಜನೆಯು 10 ವರ್ಷ ಪೂರ್ಣಗೊಳಿಸಿದ ಹಿನ್ನಲೆಯಲ್ಲಿ ಜಿಲ್ಲಾ ಮಟ್ಟದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಲಿಂಗಾನುಪಾತನ ಕಡಿಮೆಯಾಗಲು ನಮ್ಮ ಸಮಾಜ, ನಮ್ಮ ವ್ಯವಸ್ಥೆ ಹಾಗೂ ನಮ್ಮ ಕುಂಟುಬ ಕಾರಣವಾಗಿದೆ. ಸಮಾಜದಲ್ಲಿ ಗಂಡು ಮಗು ವಂಶೋದ್ಧಾರಕ ಎಂಬ ತಪ್ಪು ಕಲ್ಪನೆಯಿಂದ ಗಂಡು ಮಕ್ಕಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿದೆ. ಈ ಮನೋಭಾವ ಬದಲಾಗಬೇಕು, ಎಲ್ಲಿ ಮಹಿಳೆಯರನ್ನು ಪೂಜಿಸುತ್ತಾರೆ ಅಲ್ಲಿ ದೇವತೆಗಳು ವಾಸವಾಗಿರುತ್ತಾರೆ ಎಂದು ಹೇಳಲಾಗುತ್ತದೆ. ಸಂವಿಧಾನದಲ್ಲಿ ಸಹ ಮಹಿಳೆಯರಿಗೆ ರಕ್ಷಣೆ ನೀಡಲಾಗಿದೆ. ಮಹಿಳೆ ಹಾಗೂ ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಅನೇಕ ಕಾನೂನುಗಳನ್ನು ಜಾರಿಗೆ ತರಲಾಗಿದ್ದರೂ ಸಹ ದಿನನಿತ್ಯ ಪ್ರತಿ ಸೆಕೆಂಡ, ನಿಮಿಷ ಹಾಗೂ ಗಂಟೆಗೂ ಮಹಿಳೆ ಮತ್ತು ಮಕ್ಕಳ ಮೇಲೆ ದೌರ್ಜನ್ಯ ಹಾಗೂ ಅತ್ಯಾಚಾರ ನಡೆಯುತ್ತಿರುವುದು ನಾವು ದಿನಿತ್ಯ ಮಾಧ್ಯಮಗಳಲ್ಲಿ ನೋಡುತ್ತೇವೆ. ಇಂದು ನಗರದ ಸಖಿ ಸೆಂಟರ್‌ಗೆ ಭೇಟಿ ನೀಡಿದಾಗ 900ಕ್ಕೂ ಅಧಿಕ ಪ್ರಕರಣಗಳು ಇರುವುದು ವಿಷಾಧದ ಸಂಗತಿಯಾಗಿದೆ ಎಂದರು.

ಲಿಂಗಾನುಪಾತ ಸಮಾನತೆ ಕಾಯ್ದುಕೊಳ್ಳಲು ಮಾನ್ಯ ಪ್ರಧಾನ ಮಂತ್ರಿಗಳು " ಮಗಳನ್ನು ಉಳಿಸಿ ಮಗಳನ್ನು ಓದಿಸಿ" ಕಾರ್ಯಕ್ರಮ ಜಾರಿಗೆ ತಂದು 10 ವರ್ಷಗಳಾಗಿವೆ. ಈ ಕಾರ್ಯಕ್ರಮದ ಕುರಿತು ಎಲ್ಲರೂ ತಿಳಿದುಕೊಳ್ಳಬೇಕು ಹಾಗೂ ತಮ್ಮ ನೆರೆಹೊರೆಯವರಿಗೆ ಜಾಗೃತಿ ಮೂಡಿಸಬೇಕು. ಸಮಾಜದ ದೃಷ್ಟಿಕೋನ ಬದಲಾಗಬೇಕು. ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಅವರನ್ನು ಸುಶಿಕ್ಷಿತರನ್ನಾಗಿ ಮಾಡುವ ಜೊತೆಗೆ ಸಬಲರನ್ನಾಗಿ ಮಾಡಬೇಕು. ಹೆಣ್ಣು ಮಕ್ಕಳ ಇಲ್ಲದ ಸಮಾನ ಊಹಿಸಿಕೊಳ್ಳಲು ಸಾಧ್ಯವಿಲ್ಲ. ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಸಮಾಜದ ಮುಖ್ಯವಾಹಿನಿಗೆ ತರುವ ಕೆಲಸವಾಗಬೇಕಿದೆ. ಈ ಕೆಲಸ ಒಂದು ಇಲಾಖೆ ಅಥವಾ ಸರ್ಕಾರದಿಂದ ಮಾತ್ರ ಸಾಧ್ಯವಿಲ್ಲ, ಈ ಕಾರ್ಯಕ್ಕೆ ಸಂಘ–ಸಂಸ್ಥೆಗಳು, ಸಾರ್ವಜನಿಕರು ಕೈಜೋಡಿಸಬೇಕು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಬಿ.ಆರ್.ಮುತಾಲಿಕದೇಸಾಯಿ ಅವರು ಮಾತನಾಡಿ, ಜಗತ್ತು ಉಳಿಯಲು ಹಣ್ಣು ಮಕ್ಕಳ ಅವಶ್ಯಕತೆ ಇದೆ. ಹೆಣ್ಣು ಮಕ್ಕಳ ರಕ್ಷಣೆಗೆ, ವಿದ್ಯಾಭ್ಯಾಸಕ್ಕೆ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಯೋಜನೆಗಳ ಸದುಪಯೋಗ ಪಡೆದುಕೊಂಡು ಉತ್ತಮ ಶಿಕ್ಷಣ ಪಡೆದುಕೊಳ್ಳಬೇಕು. ಪೋಕ್ಸೋ ಕಾಯ್ದೆ, ಹೆಣ್ಣು ಮಕ್ಕಳ ರಕ್ಷಣೆ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ ಸೇರಿದಂತೆ ವಿವಿಧ ಕಾಯ್ದೆಗಳ ಬಗ್ಗೆ ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಕ್ಷಯ್ ಶ್ರೀಧರ್ ಅವರು ಮಾತನಾಡಿ, ಹೆಣ್ಣು ಮಕ್ಕಳನ್ನು ಉಳಿಸುವ ಕೆಲಸವಾಗುತ್ತಿದೆ, ಓದಿಸುವ ಕೆಲಸವಾಗಬೇಕು. ಪಾಲಕರು ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಆದ್ಯತೆ ನೀಡಬೇಕು. ಓದಿನ ಜೊತೆಗೆ ಜೀವನ ಕೌಶಲ್ಯದ ಶಿಕ್ಷಣ ನೀಡಬೇಕು ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಶ್ರೀಮತಿ ಅನ್ನಪೂರ್ಣ ಸಂಗಳದ ಅವರು ಬಾಲ್ಯ ವಿವಾಹ ನಿಷೇದ ಕಾಯ್ದೆ ಬಗ್ಗೆ ಹಾಗೂ ಸಖಿ ಒನ್ ಸ್ಟಾಪ್ ಸೆಂಟರ್ ಕೇಂದ್ರ ಆಡಳಿತಗಾರತಿ ಶ್ರೀಮತಿ ಭಾಗ್ಯ ಗುಬ್ಬೇರ ಅವರು ಸಖಿ ಒನ್ ಸ್ಟಾಪ್ ಸೆಂಟರ್ ಸೌಲಭ್ಯಗಳ ಕುರಿತು ಉಪನ್ಯಾಸ ನೀಡಿದರು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಸುರೇಶ ಹುಗ್ಗಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಾ.ಉಮೇಶಪ್ಪ ಎಚ್, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಶ್ರೀಮತಿ ಗೀತಾ ಪಾಟೀಲ ಇತರರು ಉಪಸ್ಥಿತರಿದ್ದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಶ್ರೀನಿವಾಸ ಆಲದರ್ತಿ ಸ್ವಾಗತಿಸಿ, "ಮಗಳನ್ನು ಉಳಿಸಿ ಮಗಳನ್ನು ಓದಿಸಿ" ಪ್ರತಿಜ್ಞಾವಿಧಿ ಬೋಧಿಸಿದರು.

ಮಕ್ಕಳಿಗೆ ಹೊಸಬಟ್ಟೆ ವಿತರಣೆ: ಜನವರಿ 24 ರಂದು ಜನಿಸಿದ ಹೆಣ್ಣು ಮಕ್ಕಳ ಜನ್ಮ ದಿನಾಚರಣೆಯನ್ನು ಕೇಕ್ ಕಟ್ ಮಾಡುವ ಮೂಲಕ ಆಚರಣೆ ಮಾಡಿ, ಮಕ್ಕಳಿಗೆ ಚಾಕಲೇಟ್ ಹಾಗೂ ಹೊಸ ಬಟ್ಟೆ ವಿತರಿಸಲಾಯಿತು.

ಸನ್ಮಾನ: ಇದೇ ಸಂದರ್ಭದಲ್ಲಿ ರಾಷ್ಟ್ರಮಟ್ಟದ ಹ್ಯಾಂಡಬಾಲ್ ಕ್ರೀಡೆಯಲ್ಲಿ ದ್ವಿತೀಯ ಸ್ಥಾನ ಪಡೆದ ಹಾವೇರಿ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಗಳನ್ನು ಹಾಗೂ ಜಿಲ್ಲಾ ಮಟ್ಟದಲ್ಲಿ ತ್ರಿವಿಧ ಜಿಗಿತದಲ್ಲಿ ವೀರಗ್ರಾಣಿ ಪ್ರಶಸ್ತಿ ಪಡೆದ ರಾಣೇಬೆನ್ನೂರು ಸರ್ಕಾರಿ ಬಾಲಕಿಯರ ಬಾಲ ಮಂದಿರದ ಪೂಜಾ ಹೊಂಬಳ ಅವರನ್ನು ಸನ್ಮಾನಿಸಲಾಯಿತು.

ಪ್ರತಿಜ್ಞಾವಿಧಿ: ಕಾರ್ಯಕ್ರಮದ ಆರಂಭದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಎಲ್. ನಾಗರಾಜ ಅವರು ಮತದಾರರ ಪ್ರತಿಜ್ಞಾ ವಿಧಿ ಬೋಧಿಸಿದರು.

ಜಿಲ್ಲಾ ನಿರೂಪಣಾಧಿಕಾರಿ ಶ್ರೀಮತಿ ಶೈಲಾ ಕುರಹಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಚೇರಿ ಅಧೀಕ್ಷಕಿ ಶ್ರೀಮತಿ ಸುಮಂಗಲಾ ಇಂಬಕ್ಕನವರ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

******

BELAGINA SURYODHYA KANNADA DAILY MORNING Editor, Printer, PUblisher and Owned By GURURAJ IRAPPA KADAM Plot No.2743 NEAR KEB POWER HOUSE RAMTEERTH NAGAR, SHIVAJI NAGAR BELAGAVI-590016
DIST-BELAGAVI,STATE KARNATAKA PRINTED At M/S LAXMI PRINTERS, No. 627,Auto Nagar,Belagavi,Dist- Belagavi Karnataka, RNI No. KARKAN/2019/77640, Volume : 06, Issue : 296, Postal Reg No. PMG/KA/NK/BM/135/25-26 / POST AT Vantamury Colony Post Office

## ಇಂಡೋನೇಷ್ಯಾದ ಬಾಲಿಯಲ್ಲಿ 47ನೇ ಅಂತರಾಷ್ಟ್ರೀಯ ಸಾಂಸ್ಕೃತಿಕ ಸೌರಭ ಯಶಸ್ವಿ

# ಮೌಲ್ಯ ಕಣ್ಮರೆಯಾದರೆ ಸಂಸ್ಕೃತಿಯ ಉಳಿವು ಕಷ್ಟ: ಡಾ.ಅರ್ಚನಾ ಅಥಣಿ

ಮೋಳೆ:- ಅಂತರಾಷ್ಟ್ರೀಯ ಸಾಂಸ್ಕೃತಿ-ಕ ಸೌರಭ ಪರಿಷತ್ ಇಂಡಿಯಾ ಮತ್ತು ಗ್ಲೋಬಲ್ ಪೀಸ್ ಫೌಂಡೇಶನ್ ಸಂಂ-ಯುಕ್ತವಾಗಿ ಜನವರಿ 19ರಂದು ಅಷ್ಟೂನ್ ಸಭಾಂಗಣದಲ್ಲಿ 47ನೇ ಅಂತರಾಷ್ಟ್ರೀಯ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಪ್ರಾರಂಬದಲ್ಲಿ ಸಸಿಗೆ ನೀರನ್ನೆರಿಯುವ ಮೂಲಕ ಸಮಾರಂಭಕ್ಕೆ ಚಾಲನೆ ನೀಡಿದ ರಾಯಚೂರಿನ ಕುಬೇರ ಪ್ಯಾಲೇಸ್ ನ ಎಂ. ಡಿ., ಡಾ. ಈ. ಆಂಜನೇಯ ಅವರು ಮಾತನಾಡಿ, ಹಚ್ಚ ಹಸುರಿನಿಂದ ಕೂಡಿರುವ ಬಾಲಿ ದ್ವೀಪ ನಿಸರ್ಗದ ಕೊಡುಗೆಯಾಗಿದೆ. ಇಲ್ಲಿಯ ಜನರು ಸ್ನೇಹ ಮಯಿಗಳು ಮತ್ತು ಸದಾ ಹಸನ್ಮುಖಿಗಳು. ಇಂತಹ ಪರಿಸರದಲ್ಲಿ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳು ಯಶಸ್ವಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ರಡ್ಡೇರಹಟ್ಟಿ ಸರಕಾರಿ ಪ್ರೌಢ ಶಾಲೆಯ ಸಹ ಶಿಕ್ಷಕಿ, ಲೇಖಕಿ ಡಾ. ಅರ್ಚನಾ ಅಥಣಿ ಯವರು ಧಾರ್ಮಿಕ, ಸಾಮಾಜಿಕ,ಸಂಸ್ಕೃತಿಯ ಉಳಿವು ಮತ್ತು ಬೆಳವಣಿಗೆ ಕಷ್ಟವಾಗುತ್ತಿದೆ. ದೇಶ,ನಮ್ಮ ಸಂಸ್ಕೃತಿ ಮಾನವನ ಎರಡು ಕಣ್ಣುಗಳು ಇದ್ದಂತೆ.ಎಲ್ಲರಲ್ಲೂ ದೇಶ ಮತ್ತು ಸಂಸ್ಕೃತಿಯ ಬಗ್ಗೆ ಸ್ವಾಬಿಮಾನ ತುಂಬಿರಬೇಕು.



ಅಂಥ ವಿಷಯವುಳ್ಳ ಪುಸ್ತಕಳನ್ನು ಓದುವ ಹವ್ಯಾಸವನ್ನು ಪ್ರತಿಯೊಬ್ಬರು ಬೆಳೆಸಿಕೊಳ್ಳಬೇಕೆಂದು ಡಾ.ಅರ್ಚನಾ ಅಥಣಿ ಅಭಿಪ್ರಾಯಪಟ್ಟರು

ವಿಶೇಷ ಆಮಂತ್ರಿತರಾದ ನಿವೃತ್ತ ಜಿಲ್ಲಾಧಿಕಾರಿ ಡಾ. ಡಿ. ಎಸ್ ವಿಶ್ವನಾಥ್ ಮಾತನಾಡಿ ನಮ್ಮ ಜೀವನದಲ್ಲಿ ತಂದೆ ತಾಯಿ ಶಿಕ್ಷಕರು ಆದಿ ಗುರುಗಳಾಗಿರುತ್ತಾರೆ, ಸ್ನೇಹಿತರು ಮತ್ತು ಸಹೋದ್ಯೋಗಿಗಳು ಕಾರಣ ಗುರುಗಳಾಗುತ್ತಾರೆ ಮತ್ತು ಬದುಕಿಗೆ ಪರಿಪೂರ್ಣತೆಯ ಮಾರ್ಗದರ್ಶನ ಕೊಡುವ ಹಿತೈಷಿಗಳು ಆದ್ಯ ಗುರುಗಳಾಗುತ್ತಾರೆ. ಈ ಮೂವರನ್ನು ನಾವು ಎಂದೂ ಮರೆಯಬಾರದು ಎಂದರು.

ಇನ್ನೋರ್ವ ವಿಶೇಷ ಆಮಂತ್ರಿತರಾದ ಇಂಡೋನೇಷ್ಯಾ ಬಾಲಿಯ ಬಿಜಿನೆಸ್ ಅಡ್ವೈಸರ್ ಶ್ರೀಮತಿ ನ್ಯೂ ಮ್ಯಾನ್ ಸ್ರಿ ಮಾತನಾಡಿ, ಇಂಡ್ಯನೇಷಿಯಾ ಮತ್ತು ಇಂಡಿಯಾದ ಬಾಂಧವ್ಯಕ್ಕೆ ಬಹಳ ಪುರಾತನವಾದ ಇತಿಹಾಸವಿದೆ. ಮತ್ತು ಈ ಎರಡು ದೇಶಗಳ ನಡುವಿನ ಕಲೆ ಮತ್ತು ಸಂಸ್ಕೃತಿಗಳಲ್ಲಿ ಹೆಚ್ಚಿನ ಸಾಮ್ಯತೆ ಕಂಡು ಬರುತ್ತದೆ ಎಂದರು.

ಬೆಳಗಾವಿಯ ಲೇಖಕಿ ಅರ್ಚನಾ ಅಥಣಿ ಅವರ ಪ್ರವಾಸ ಕಥನ ಮೋಹಕ ಮಾಲ್ಡೀವ್ಸ್ ಕೃತಿಯನ್ನು ಲೋಕಾರ್ಪಣೆ ಮಾಡಿ ಮಾತನಾಡಿದ ಅಂತರಾಷ್ಟ್ರೀಯ ಸಾಂಸ್ಕೃತಿಕ ಸೌರಭ ಸಮಿತಿಯ ಗೌರವಾಧ್ಯಕ್ಷ ಡಾ. ಪಲ್ಲವಿ ಮಣಿ (ಸುಬ್ರಮಣಿ ) ವಿದೇಶಿ ನೆಲದಲ್ಲಿ ಉತ್ತಮ ಕೃತಿ ಒಂದನ್ನು ಬಿಡುಗಡೆ ಮಾಡುವ ಅವಕಾಶ ದೊರಕಿದ್ದು ನನ್ನ ಸೌಭಾಗ್ಯ, ಇತ್ತೀಚಿನ ವರ್ಷಗಳಲ್ಲಿ ಪ್ರವಾಸ ಕಥನಗಳು ಸಾಕಷ್ಟು ಸಂಖ್ಯೆಯಲ್ಲಿ ಹೊರ ಬರುತ್ತಿವೆ. ಇದೊಂದು ಉತ್ತಮ ಬೆಳವಣಿಗೆ. ಈ ಮೂಲಕ ಜಗತ್ತನ್ನು ಸುತ್ತುವ ಪ್ರವಾಸಿಗಳಿಗೆ ನಮ್ಮದೇ ಭಾಷೆಯಲ್ಲಿ ಮಾಹಿತಿ ಸಿಕ್ಕರೆ ಹೆಚ್ಚು ಅನುಕೂಲವಾಗುತ್ತದೆ ಎಂದರು.

ಅಂತರಾಷ್ಟ್ರೀಯ ಸಾಂಸ್ಕೃತಿಕ ಸೌರಭ ಪರಿಷತ್ ಇಂಡಿಯಾ ಸ್ಥಾಪಕ ಅಧ್ಯಕ್ಷ ಕೆ. ಪಿ ಮಂಜುನಾಥ್ ಸಾಗರ್ ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ 2004 ರಿಂದ ವಿವಿಧ ದೇಶಗಳ ಕನ್ನಡ ಸಂಘಗಳು ಸಾಂಸ್ಕೃತಿ-ಕ ವಿನಿಮಯ ಕಾರ್ಯಕ್ರಮಕ್ಕೆ ನೀಡಿದ ಬೆಂಬಲ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಈ ಕಾರ್ಯಕ್ರಮದ ಅನನ್ಯತೆಯನ್ನು ಅರಿತ ವಿದೇಶಿ ಸಂಘಟನೆಗಳು ಸಹಯೋಗ ನೀಡುತ್ತಿರುವುದು ನಮ್ಮ ಪ್ರಯತ್ನಕ್ಕೆ ದೊರೆತ ಜಯವಾಗಿದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ವಿಜಾಪುರದ ಡಾ. ನಾಗೂರ್ ಎಜುಕೇಶನ್ ಟ್ರಸ್ಟ್ ನ ಅಧ್ಯಕ್ಷ ಡಾ. ಕೆ ಬಿ ನಾಗೂರ್ ಮಾತನಾಡಿ ಕಲೆ ಮತ್ತು ಸಂಸ್ಕೃತಿ, ಶಾಂತಿ ಮತ್ತು ಸೌಹಾರ್ತೆಯನ್ನು ಪೋಷಿಸುವ ಸಂಘಟನೆಗಳ ಬೆಳವಣಿಗೆಗೆ ನಾವೆಲ್ಲರೂ ಸಹಕಾರ ನೀಡೋಣ ಎಂದು ಕರೆ ಕೊಟ್ಟರು

ಸಮಾರಂಭದ ಮುಖ್ಯ ಅತಿಥಿಗಳಾದ ಸೂರತ್ ಕನ್ನಡ ಸಂಘದ ಅಧ್ಯಕ್ಷ ರಾಧಾಕೃಷ್ಣ ಶೆಟ್ಟಿ, ಮೈಸೂರಿನ ಚಿತ್ರ ಕಲಾವಿದ ಡಾ. ಪ್ರಶಾಂತ್, ಶೃಂಗೇರಿಯ ಶ್ರೀ ಶಂಕರ ಶಿಲ್ಪ ಕಲಾ ಕೇಂದ್ರದ ಮುಖ್ಯಸ್ಥ ಮಹೇಶ್ ಭಟ್ ಹುಲುಗಾರು ಮತ್ತು ಬೆಳಗಾವಿ ಜಿಲ್ಲೆಯ ಡಾ.ಅರ್ಚನಾ ಅಥಣಿ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು.

ವಿವಿಧ ಕ್ಷೇತ್ರದ ಸಾಧಕ ಮಹನೀಯರುಗಳಾದ ಶ್ರೀಮತಿ ಪ್ರಭಾ ಶಾಸ್ತ್ರಿ ಶಿವಮೊಗ್ಗ, ರಾಧಾಕೃಷ್ಣ ಶೆಟ್ಟಿ ಸೂರತ್, ಚಿಂತಾ ರವೀಂದರ್ ಹೈದರಾಬಾದ್, ಕೊಸುರು ರತ್ನಂ, ಪ್ರಶಾಂತ್ ಮೈಸೂರ್ ಮತ್ತು ವಿದುಷಿ ಮಾಧವಿ ಡಿ ಕೆ ದಾವಣಗೆರೆ ಇವರುಗಳಿಗೆ ಏಷ್ಯಾ ಪೆಸಿಫಿಕ್ ಐಕಾನಿಕ್ ಅವಾರ್ಡ್ ಪ್ರಧಾನ ಮಾಡಲಾಯಿತು

ಬಾಲಿಯ ಸ್ಥಳೀಯ ಕಲಾವಿದರ ಸಾಂಪ್ರದಾಯಿಕ ನೃತ್ಯ ಬರೊಂಗ್ ಪ್ರೇಷಕರನ್ನು ಮಂತ್ರಮುಗ್ಧಗೋಳಿಸಿತು. ದಾವಣಗೆರೆಯ ನಮನ ಅಕಾಡೆಮಿಯ ನಿರ್ದೇಶಕಿ ವಿದುಷಿ ಮಾಧವಿ ಡಿ.ಕೆ ಅವರು ಕುವೆಂಪು ರಚನೆ ಎಲ್ಲಾದರೂ ಇರು ಸಾಹಿತ್ಯಕ್ಕೆ ಸಂಂ-ಯೋಜಿಸಿದ ನೃತ್ಯ ರೂಪಕ ಮನಮುಟ್ಟುವಂತೆ ಪ್ರದರ್ಶಿಸಲ್ಪಟ್ಟಿತು. ಪೂರ್ಣಿಮಾ ಸತೀಶ್ ಮತ್ತು ಆರತಿ ಸುರೇಶ್ ಅವರ ನೃತ್ಯ, ಪ್ರೊ. ಬಿಂಡಿಗ ನವಿಲೇ ಭಗವಾನ್ ಅವರ ಕವನ ವಾಚನ ಮತ್ತು ಪ್ರಶಾಂತ್ ಮೈಸೂರು ಅವರ ವಿಶ್ವ ಸೌಹಾರ್ದತೆ ಕುರಿತ ಸಂದೇಶ ಚೆನ್ನಾಗಿ ಮೂಡಿ ಬಂದವು.

## ಶ್ರೀಮತಿ ಜ್ಯೋತಿ ಅವರಿಗೆ ರಾಜ್ಯಮಟ್ಟದ ಆದರ್ಶ ಪ್ರಾಚಾರ್ಯರು ಪ್ರಶಸ್ತಿ



ತಾಳಿಕೋಟೆ, ಪಟ್ಟಣದ ವಿ.ವಿ.ಎಸ್.ಮಹಿಳಾ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶ್ರೀಮತಿ ಜ್ಯೋತಿ ಚ ಹಿರೇಮಠ ಅವರಿಗೆ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ (ರಿ ) ಬೆಂಗಳೂರು, ಜಿಲ್ಲಾ ಘಟಕ ವಿಜಯಪುರ ಕೂಡ ಮಾಡುವ 2024-25 ಜ್ಯೋತಿಬಾ ಫುಲೆ ರಾಜ್ಯ ಮಟ್ಟದ ಆದರ್ಶ ಪ್ರಾಚಾರ್ಯರು ಪ್ರಶಸ್ತಿ ನೀಡಿ ಪುರಸ್ಕರಿಸಲಾಗಿದೆ.

ಇತ್ತೀಚಗೆ ವಿಜಯಪುರದಲ್ಲಿ ನಡೆದ ಜಿಲ್ಲಾ ಮಟ್ಟದ ಶೈಕ್ಷಣಿಕ ಸಮ್ಮೇಳನದಲ್ಲಿ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

## ಡೆಹಾರಡೂನ್ ರಾಷ್ಟ್ರೀಯ ಮಿಲಿಟರಿ ಕಾಲೇಜ್ ಪ್ರವೇಶ ಅರ್ಜಿ ಸಲ್ಲಿಸಲು ಆಹ್ವಾನ

ಬಾಗಲಕೋಟೆ: ಉತ್ತರಾಖಂಡದ ಡೆಹಾರಡೂನ್‌ನಲ್ಲಿ ಇರುವ ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜ್‌ನ 2026ನೇ ಅಧಿವೇಶನಕ್ಕಾಗಿ 8ನೇ ತರಗತಿಯಲ್ಲಿ ಪ್ರವೇಶ ಪಡೆಯಲು ಕರ್ನಾಟಕದ ಅರ್ಹ ಬಾಲಕ ಮತ್ತು ಬಾಲಕಿಯರಿಗೆ ಅವಕಾಶ ನೀಡಲಾಗುತ್ತದೆ. ಈ ಸಂಬಂಧ ಅರ್ಹತಾ ಪ್ರವೇಶ ಪರೀಕ್ಷೆಯನ್ನು ಬೆಂಗಳೂರಿನಲ್ಲಿ 2025ರ ಜೂನ್ 1 ರಂದು (ಭಾನುವಾರ) ಆಯೋಜಿಸಲಾಗಿದೆ.

ಅಭ್ಯರ್ಥಿಗಳು ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಯಿಂದ 7ನೇ ತರಗತಿಯಲ್ಲಿ ಓದುತ್ತಿರುವ ಅಥವಾ ಉತ್ತೀರ್ಣರಾಗಿರುವವರಾಗಿರಬೇಕು. ದಿನಾಂಕ 01-07-2026ರಂತೆ 11 ವರ್ಷದಿಂದ 13 ವರ್ಷ ದೊಳಗಿರುವವರೇ (ಅಂದರೆ 02-01-2013 ರಿಂದ 01-07-2014ರೊಳಗೆ ಜನಿಸಿರುವವರು) ಪರೀಕ್ಷೆಗೆ ಅರ್ಹರು. ಹೆಚ್ಚಿನ ಮಾಹಿತಿಗಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಬೆಂಗಳೂರು ಕಚೇ-ರಿಯನ್ನು ಸಂಪರ್ಕಿಸಲು ಕೋರಲಾಗಿದೆ.

ಸಂಪರ್ಕ ಸಂಖ್ಯೆ:080-25589459 ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

********



ಬೈಲಹೊಂಗಲ-ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಕರ್ನಾಟಕ ದರ್ಶನ ಕಾರ್ಯಕ್ರಮದಡಿಯಲ್ಲಿ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಮತ್ತು ಪ್ರವಾಸೋಧ್ಯಮ ಇಲಾಖೆಯ ಅಡಿಯಲ್ಲಿ ತಾಲೂಕಿನ ಆಯ್ದ ಪ್ರೌಢಶಾಲೆಗಳ 92 ವಿದ್ಯಾರ್ಥಿಗಳು ಪ್ರವಾಸಕ್ಕೆ ಆಯ್ಕೆಯಾಗಿದ್ದು ಈ ವಿದ್ಯಾರ್ಥಿಗಳನ್ನು ಗುರುವಾರ ಬೈಲಹೊಂಗಲ ನಗರದಿಂದ ಐದು ದಿನಗಳ ಪ್ರವಾಸಕ್ಕೆ ಬಿಇಓ ಎ.ಎನ್.ಪ್ಯಾಟಿ ಹಾಗೂ ಸಿಬ್ಬಂದಿ ವರ್ಗ ಶೈಕ್ಷಣಿಕ ಅಧ್ಯಯನ ಪ್ರವಾಸಕ್ಕೆ ಬಸ್ಸುಗಳಿಗೆ ಪೂಜೆ ಸಲ್ಲಿಸಿ ಬಿಳ್ಕೊಟ್ಟರು.
ಕ್ಷೇತ್ರ ಸಮನ್ವಯ ಅಧಿಕಾರಿ ಬಿ.ಎನ್.ಕಸಾಳೆ, ಮುಖ್ಯೋಪಾಧ್ಯಾಯ ಆರ.ಎನ.ಮಾಳನ್ನವರ, ಬಿ.ಎಂ.ಹುಡೇದ, ಡಿ.ಎಂ.ನಾಯ್ಕರ, ಮಲ್ಲಿಕಾರ್ಜುನ್ ಬೋಳಶೆಟ್ಟಿ, ಗಾಯತ್ರಿ ಪತ್ತಾರ, ರಾಜಶೇಖರ ಗಣಾಚಾರಿ, ಎನ್.ಆರ್. ಠಕಾಯಿ, ಸ್ಕೌಟ್ಸ ಮತ್ತು ಗೈಡ್ ಕಾರ್ಯದರ್ಶಿ ಅಜ್ಜಪ್ಪ ಅಂಗಡಿ, ಕಚೇರಿಯ ಡಿ.ಇ.ಓ. ಶ್ರೀಶೈಲ ಹಿರೇಮಠ, ರಾಮಕೃಷ್ಣ ಮಾದರ, ಮಾರ್ಗದರ್ಶಿ ಶಿಕ್ಷಕರಾದ ಜಿ. ಕೆ. ಸುಲ್ತಾನ್‌ಭಾಯಿ, ರಮೇಶ ಇಂಗಳಗಿ, ಎಸ್. ಆರ್. ಮೆಳವಂಕಿ, ಪುಷ್ಪಾ ಶೀಂತ್ರಿ, ಆಯ್.ಜಿ.ಬಾಗಲಕೋಟೆ, ಆರ್.ಡಿ.ಚಲವಾದಿ ಮುಂತಾದವರು ಉಪಸ್ಥಿತರಿದ್ದರು.

## 15ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮ

ರಾಯಬಾಗ: ಮತದಾನದ ಮಹತ್ವದ ಬಗ್ಗೆ ಪ್ರತಿಯೊಬ್ಬರಿಗೂ ಅರಿವು ಮತ್ತು ಜಾಗೃತಿಗೊಳಿಸಲು ಮತದಾರರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ಎಂದು ಹಿರಿಯ ದಿವಾಣಿ ನ್ಯಾಯಾಧೀಶ ಜಗದೀಶ ಬಿಸೇರೊಟ್ಟಿ ಹೇಳಿದರು.

ಶನಿವಾರ ಪಟ್ಟಣದ ಮಹಾವೀರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ತಾಲೂಕು ಆಡಳಿತ ಮತ್ತು ತಾಲೂಕು ಕಾನೂನು ಸೇವಾ ಸಮಿತಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 15ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಉತ್ತಮ ಮತ್ತು ಬಲಿಷ್ಠ ಪ್ರಜಾಪ್ರಭುತ್ವ ರಾಷ್ಟ್ರವನ್ನು ಕಟ್ಟಲು ಉತ್ತಮ ಅಭ್ಯರ್ಥಿ ಆಯ್ಕೆ ಮಾಡುವ ಜವಾಬ್ದಾರಿ ಪ್ರತಿಯೊಬ್ಬ ಮತದಾರರ ಮೇಲೆ ಇರುವುದ-ರಿಂದ ಕಡ್ಡಾಯವಾಗಿ 18 ವರ್ಷ ಮೇಲ್ಪಟ್ಟ ಮತದಾನ ಹಕ್ಕು ಪಡೆದವರು ಚುನಾವಣೆಯ ಮತದಾನದಲ್ಲಿ ಭಾಗವಹಿಸಬೇಕೆಂದರು.

ತಹಶೀಲ್ದಾರ ಸುರೇಶ ಮುಂಜೆ ಪ್ರಸ್ತಾವಿಕವಾಗಿ ಮಾತನಾಡಿ, ಭಾರತದ ಸಂವಿಧಾನ ಜಾರಿಕ್ಕಿಂತ ಮುಂಚೆ ಕೇವಲ ಶ್ರೀಮಂತರಿಗೆ, ಪದವಿಧರರಿಗೆ ಮತ್ತು ಜಮೀನ್ದಾರರಿಗೆ ಮಾತ್ರ ಮತದಾನದ ಹಕ್ಕು ಇತ್ತು. ಆದರೆ ಸಂವಿಧಾನ ಜಾರಿಯಾದ ನಂತರ ಭಾರತ ಎಲ್ಲ ವಯಸ್ಕರಿಗೆ ಮತದಾನ ಹಕ್ಕು ಲಭಿಸಿದೆ. ಭಾರತದಲ್ಲಿ ಇಷ್ಟು ವರ್ಷ



ಪ್ರಜಾಪ್ರಭುತ್ವ ಗಟ್ಟಿಯಾಗಿ ನೆಲೆವೂರಲು ನಮಗೆಲ್ಲರಿಗೆ ದೊರೆತ ಮತದಾನದ ಹಕ್ಕು ಅದಕ್ಕೆ ಕಾರಣ. ಭಾರತದಲ್ಲಿ ಬಲಿಷ್ಠ ಚುನಾವಣೆ ವ್ಯವಸ್ಥೇ ಇದ್ದು, ಚುನಾವಣೆಯಲ್ಲಿನ ಅಕ್ರಮಗಳನ್ನು ಹಾಗೂ ಮುಕ್ತ ಮತ್ತು ನ್ಯಾಯಯುತ ಚುನಾವಣೆ ನಡೆಸಲು ಇನ್ನು ಹೆಚ್ಚಿನ ಜಾಗೃತಿ ಮೂಡಿಸಲು 2011 ರಿಂದ ಮತದಾನ ದಿನವನ್ನು ಆಚ-ರಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಧಾನ ದಿವಾಣಿ ನ್ಯಾಯಾಧೀಶೆ ಪ್ರಿಯಾ ಭಟ್ಟಡ, ವಕೀರಲ ಸಂಘದ ಅಧ್ಯಕ್ಷ ಪಿ.ಎಮ್.ದರೂರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಶಾನೂರ ಐಹೊಳೆ, ಎಪಿಪಿ ಹನಮಂತ ಅಚಮಟ್ಟಿ, ತಾ.ಪಂ.ಇಒ ಅರುಣ ಮಾಚಕನೂರ, ಬಿಇಒ ಬಸವರಾಜಪ್ಪ ಆರ್.,. ಸಿಡಿಪಿಒ ಭಾರತಿ ಕಾಂಬಳೆ, ಪಿಡಬ್ಲ್ಯೂಡಿ ಎಇಇ ಆರ್.ಬಿ.ಮನವಡ್ಡರ, ಲಕ್ಷ್ಮೀಸೇನ ಶಿಕ್ಷಣ ಸಂಸ್ಥೆ ಅಧ್ಯಕ್ಷ ದಶರಥ ಶೆಟ್ಟಿ, ಪ್ರಾಚಾರ್ಯ ಆಶಾರಣಿ ಪಟ್ಟಣ-ಕೋಡಿ, ಡಾ.ಎಮ್.ಬಿ.ಪಾಟೀಲ, ಕಲ್ಪನಾ ಕಾಂಬಳೆ, ಟಿ.ಎಸ್.ಕುರಬೆಟ್ಟ, ಸೋಮಶೇಖರ ಜೋರೆ, ಹನಮಂತ ದಶವಂತ, ರಾಜು ದಾನೋಳೆ, ರಾಜು ಕುರಾಡೆ, ಅನೀಲ ಸುತಾರ ಹಾಗೂ ಬಿ.ಎಲ್.ಓ ಗಳು ಮತ್ತು ವಿದ್ಯಾರ್ಥಿಗಳು ಇದ್ದರು. ತಹಶೀಲ್ದಾರ ಸುರೇಶ ಮುಂಜೆಯವರು ಪ್ರತಿಜ್ಞಾ ವಿಧ ಬೋಧಿಸಿದರು. ಉತ್ತಮ ಕಾರ್ಯನಿರ್ವಹಿಸಿದ ಬಿ.ಎಲ್.ಓ ಗಳಿಗೆ ಪ್ರಶಸ್ತಿ ಪ್ರಮಾಣ ಪತ್ರ ವಿತರಿಸಲಾಯಿತು.

ಶಿಕ್ಷಕ ಅಮೋಘ ನಾಯಿಕ ಸ್ವಾಗತಿಸಿ, ನಿರೂಪಿಸಿದರು.

## ಬೀದಿಬದಿ ದನಗಳನ್ನು ಗೋ ಶಾಲೆಗೆ ಸ್ಥಳಾಂತರ



ಗದಗ: ಗದಗ-ಬೆಟಗೇರಿ ಅವಳಿ ನಗರದಲ್ಲಿ ಬೀದಿ ದನಗಳ ಹಾವಳಿ ಹೆಚ್ಚಾಗಿರುವ ಕುರಿತು ದೂರುಗಳು ನಗರಸಭೆಗೆ ಸ್ವೀಕೃತವಾಗಿದ್ದು ಹಾಗೂ ಸಾರ್ವಜನಿಕರಿಗೆ ಬೀದಿ ದನಗಳ ಹಾವಳಿಯಿಂದ ತೊಂದರೆಉಂಟಾಗಿರುವ ಘಟನೆಗಳನ್ನ ಆದ-ರಿಸಿ ಗದಗ-ಬೆಟಗೇರಿ ನಗರಸಭೆ ವತಿಯಿಂದ ಬೀದಿ ದನಗಳನ್ನು ಹಿಡಿದು ಗೋಶಾಲೆಗೆ ರವಾನಿಸಲಿಕ್ಕೆ ನಿರ್ಣಯಿಸಲಾಗಿದೆ. ಇಲ್ಲಿಯವರೆಗೂ ಬೆಟಗೇರಿ ಭಾಗದ ಮಾರುಕಟ್ಟೆ ಪ್ರದೇಶದಲ್ಲಿ ಬೀದಿ ದನಗಳ ಹಿಡಿಯುವ ಕಾರ್ಯಚರಣೆ ನಡೆಸಿ ಪ್ರಮೋದಾತ್ಮ ಗೋ ಸಂರಕ್ಷಣಾ ಕೇಂದ್ರಕ್ಕೆ ಒಟ್ಟು 80 ಬೀದಿ ದನಗಳನ್ನು ಹಿಡಿದು ಗೋಶಾಲೆಗಳಿಗೆ ರವಾನಿಸಲಾಗಿರುತ್ತದೆ.

ಈ ಸಂದರ್ಭದಲ್ಲಿ , ಗದಗ-ಬೆಟಗೇರಿ ನಗರಸಭೆಯ ಪರಿಸರ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಆನಂದಯ ಬದಿ, ಬೆಟಗೇರಿ ಪೋಲಿಸ್ ಠಾಣೆ ಉಪ ನಿರೀಕ್ಷಕ ಲಕ್ಷ್ಮಣ, ಹಿರಿಯಆರೋಗ್ಯ ನಿರೀಕ್ಷಕ ಎಂ.ಎಂ ಮಕಾಂದರ ಹಾಗೂ ನಗರಸಭೆಯ ಸಿಬ್ಬಂದಿಗಳಾದ ಕೆಂಚಪ್ಪ ಪೂಜಾರ, ವಾಸು ಹಾದಿಮನಿ ಹಾಗೂ ಪೌರಕಾರ್ಮಿಕ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

******

## ಕಾಕತಿಯಲ್ಲಿ 27ರಂದು 10ನೇ ಬೆಳಗಾವಿ ತಾಲೂಕು ಸಾಹಿತ್ಯ ಸಮ್ಮೇಳನ: ಅಶೋಕ ಖೋತ

ಬೆಳಗಾವಿ: ತಾಲೂಕಿನ ಕಾಕತಿಯ ಶ್ರೀಸಿದ್ದೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಜ.27ರಂದು 'ಬೆಳಗಾವಿ ತಾಲೂಕು 10ನೇ ಸಾಹಿತ್ಯ ಸಮ್ಮೇಳನ' ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಸಾಹಿತ್ಯ ಸಮ್ಮೇಳನದ ಉಸ್ತುವಾರಿ ಅಶೋಕ ಖೋತ ತಿಳಿಸಿದರು.

ಸಮ್ಮೇಳನದ ಉಸ್ತುವಾರಿ ಅಶೋಕ ಖೋತ ಮಾಹಿತಿ ವಿವಿಧ ಗೋಷ್ಠಿ ಆಯೋಜನೆ ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 11 ಗಂಟೆಗೆ ಸಚಿವ ಸತೀಶ್ ಜಾರಕಿಹೊಳಿ ಸಮ್ಮೇಳನ ಉದ್ಘಾಟಿಸುವರು. ಮುಕ್ತಿಮಠದ ಶಿವಸಿದ್ದ ಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಕಸಾಪ ಅಧ್ಯಕ್ಷೆ ಮಂಗಲ ಮೆಟಗುಡ್ಡ ಆಶಯನುಡಿ ಹೇಳಲಿದ್ದಾರೆ. ತಾಪಂ ಮಾಜಿ ಸದಸ್ಯ ಯಲ್ಲಪ್ಪ ಕೋಳೆಕರ ಮಾತನಾಡುವರು. ಜಿಲ್ಲೆಯ ಜನಪ್ರತಿನಿಧಿಗಳು ಮುಖ್ಯ ಅತಿಥಿಗಳಾಗಿ ಆಗಮಿಸುವರು ಎಂದರು.

ಮಧ್ಯಾಹ್ನ 2.30ಕ್ಕೆ 1ನೇ ಗೋಷ್ಠಿ



ನಡೆಯಲಿದೆ. ರಾಣಿ ಚನ್ನಮ್ಮ ವಿವಿ ಕನ್ನಡ ಪ್ರಾಧ್ಯಾಪಕ ಡಾ. ಗಜಾನನ ನಾಯಕ ಅಧ್ಯಕ್ಷತೆ ವಹಿಸುವರು. ಹಾವೇರಿ ವಿವಿ ಕುಲಸಚಿವೆ ಡಾ. ವಿಜಯಲಕ್ಷ್ಮೀ ಪುಟ್ಟಿ, ಬಿಮ್ಸ್ ನ ಡಾ. ಸಿದ್ದು ಹುಲ್ಲೊಳಿ ಅತಿಥಿಯಾಗಿ ಆಗಮಿಸುವರು. ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ 'ಭಾಷಾ ಬಾಂಧವ್ಯದ ಮೂಲಕ ಗಡಿನಾಡ ಅಭಿವೃದ್ಧಿ; ವಿಷಯ ಕು-ರಿತು ಉಪನ್ಯಾಸ ನೀಡುವರು. ಹಿರಿಯ ಸಾಹಿತಿ ಡಾ. ಎಚ್.ಬಿ.ಸಂಜೆ 4 ಗಂಟೆಗೆ ಕವಿಗೋಷ್ಠಿ ನಡೆಯಲಿದೆ. ಹಿರಿಯ ಸಾಹಿತಿ ಎಲ್.ಎಸ್. ಶಾಸ್ತ್ರೀ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಕಸಾಪ ಕೋಶಾಧ್ಯಕ್ಷೆ ರತ್ನಪ್ರಭಾ ಬೆಲ್ಲದ, ಬೆಳಗಾವಿ ಭೂ ಸ್ವಾಧೀನಾಧಿಕಾರಿ ನಜಮಾ ಪಿರಜಾಜೆ ಅತಿಥಿಗಳಾಗಿ ಆಗಮಿಸುವರು. ಸುಧಾ ಪಾಟೀಲ ಬರೆದ 'ಚುಕ್ಕಿ ಹೇಳಿದ ಕಥೆ', ವಿ.ಸಿ. ಹಿರೇಮಠ ಅವರ 'ನಾವು ಗೆಲ್ಲಬೇಕು'. ಡಾ. ಭಾರತಿ ಮಠದ 'ಮಕ್ಕಳಿರಲೆವ್ವ ಮನೆತುಂಬ, ವೈ.ಬಿ. ಕಡಕೋಳ ಅವರ 'ಭಾವಾಂತರಂಗದಲ್ಲಿ' ಮಕರಂದ'. ನಂದಿನಿ ಸನಬಾಳ್ ಅವರ 'ಭರವಸೆಗಳ ಬೆನ್ನೇರಿ' ಪುಸ್ತಕ ಬಿಡುಗಡೆ ನಡೆಯಲಿದೆ. ಇದೇ ವೇಳೆ ವಿವಿಧ ಕ್ಷೇತ್ರಗಳ ಸಾಧಕರ ಸನ್ಮಾನ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಸಂಜೆ 5.30ಕ್ಕೆ ಸಮಾರೋಪ ಕಾರ್ಯಕ್ರಮ ನಡೆಯಲಿದೆ. ಬೆಳಗಾವಿ ಲೇಖಕಿಯರ ಸಂಘದ ಅಧ್ಯಕ್ಷೆ ಸುಮಾ ಕಿತ್ತೂರು ಅಧ್ಯಕ್ಷತೆ ವಹಿಸುವರು. ಡಾ. ಜ್ಯೋತಿರ್ಲಿಂಗ ಹೊನಕಟ್ಟಿ, ಡಾ. ಹೇಮಾ ಸೊನೊಳ್ಳಿ, ಸೈಯ್ಯದ್ ಅಫೀನ್‌ಬಾನು ಎಸ್. ಬಳ್ಳಾರಿ ಅತಿಥಿಗಳಾಗಿ ಆಗಮಿಸುವರು ಎಂದು ತಿಳಿಸಿದರು.

ಸಮ್ಮೇಳನದ ಸರ್ವಾಧ್ಯಕ್ಷರಾದ ಶೈಲಜಾ ಭಿಂಗೆ, ಎಂ.ವೈ. ಮೆಣಸಿನಕಾಯಿ, ಹೇಮಾ ಕಾಜಗಾರ, ಶಿವಾನಂದ ತಲ್ಲೂರ, ವಿ.ಎಂ. ಅಂಗಡಿ ಸುದ್ದಿಗೋಷ್ಠಿಯಲ್ಲಿದ್ದರು. ಕೋಲ್ಕಾರ 'ಸ್ತ್ರೀ ಸಬಲೀಕರಣ-ರಾಣಿ ಚನ್ನಮ್ಮಳ ಕೊಡುಗೆ' ಕುರಿತು, ಬಿಇಒ ರವಿ ಭಜಂತ್ರಿ ಅವರು 'ಯುವಜನಾಂಗದಲ್ಲಿ ಕನ್ನಡ ಪ್ರಜ್ಞೆ' ಕುರಿತು ಉಪನ್ಯಾಸ ನೀಡುವರು ಎಂದರು.

******

## ಅತ್ಯುತ್ತಮ ಚುನಾವಣಾ ಕಾರ್ಯನಿರ್ಹಣೆ ರಾಜ್ಯ ಪ್ರಶಸ್ತಿಗೆ ಬಾಜನರಾದ ಡಿಸಿ ಜಾನಕಿ




ಬಾಗಲಕೋಟೆ : ಕಳೆದ ಲೋಕಸಭಾ ಚುನಾವಣೆಯಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಅವರಿಗೆ ರಾಜ್ಯಮಟ್ಟದ ಅತ್ಯುತ್ತಮ ಚುನಾವಣಾ ಕಾರ್ಯನಿರ್ವಹಣಾ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಶನಿವಾರ ಬೆಂಗಳೂರಿನ ಶ್ರೀ ಪುಟ್ಟಣ್ಣ ಚೆಟ್ಟಿ ಟೌನ್ ಹಾಲನಲ್ಲಿ ಜರುಗಿದ ರಾಷ್ಟ್ರೀಯ ಮತದಾನ ದಿನಾಚರಣೆ ಕಾರ್ಯಕ್ರಮದಲ್ಲಿ ರಾಜ್ಯದ ರಾಜ್ಯಪಾನ ಥಾವರ್ ಚಂದ್ ಗೇಹ್ಲೋಟ್ ಅವರಿಂದ ರಾಜ್ಯ ಮಟ್ಟದ ಪ್ರಶಸ್ತಿಯನ್ನು ಪಡೆದುಕೊಂಡರು.

ಪ್ರಶಸ್ತಿಗೆ ಬಾಜನರಾದ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಅವರಿಗೆ ಜಿಲ್ಲೆಯ ಎಲ್ಲ ಅಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ.

****

## ರಾಷ್ಟ್ರೀಯ ಮತದಾನ ದಿನಾಚರಣೆ : ವಿಜೇತರಿಗೆ ಬಹುಮಾನ ವಿತರಣೆ

# ದೇಶದ ಭವಿಷ್ಯಕ್ಕಾಗಿ ಮತದಾನ ಅವಶ್ಯ : ನ್ಯಾ.ಎನ್.ವಿ.ವಿಜಯ

ಬಾಗಲಕೋಟೆ : : ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನದ ಹಕ್ಕು ನೀಡಿದ್ದು, ಆ ಒಂದು ಮತದಿಂದ ದೇಶದ ಭವಿಷ್ಯ ನಿರ್ಮಾಣವಾಗುತ್ತದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎನ್.ವಿ.ವಿಜಯ ಹೇಳಿದರು.

ತೋವಿವಿಯ ಸಭಾಭವನದಲ್ಲಿ ಶನಿವಾರ ಭಾರತ ಚುನಾವಣಾ ಆಯೋಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ನ್ಯಾಯಾಲಯ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಪೊಲೀಸ್ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಇತ್ತೀಚೆಗೆ ಯುವ ಮತದಾರರು ಮತದಾನ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಆದರೆ ನಮ್ಮನ್ನು ಆಡಳು ನಾಯಕನನ್ನು ಆಯ್ಕೆ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದ್ದು, ಮತದಾನದ ಹಕ್ಕನ್ನು ಚಲಾಯಿಸುವುದು ಕಡ್ಡಾಯ ಹಾಗೂ ಕರ್ತವ್ಯವಾಗಿದೆ ಎಂದರು.

ಇತ್ತೀಚಿನ ಚುನಾವಣೆಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಮತದಾನವಾಗುತ್ತಿದೆ. ಆದರೆ ನಗರ ಪ್ರದೇಶಗಳಲ್ಲಿ ಮತದಾನ ಕುಂಟಿ-ತಗೊಳ್ಳುತ್ತಿದೆ. ಮತದಾನದ ಬಗ್ಗೆ ಹೆಚ್ಚಿನ ಜಾಗೃತಿ ಮೂಡಬೇಕಿದೆ. ಪ್ರಜ್ಞಾವಂತ



ನಾಗರಿಕರು ದೇಶದ ಭವಿಷ್ಯಕ್ಕಾಗಿ ಪ್ರಜಾಪ್ರಭುತ್ವದಲ್ಲಿ ತಮಗೆ ನೀಡಿರುವ ಮತದಾನದ ಹಕ್ಕನ್ನು ಚಲಾಯಿಸಲು ಮುಂದಾಗಬೇಕಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಶಿಧರ ಕುರೇರ ಪ್ರತಿಜ್ಞಾವಿಧಿ ಭೋದಿಸಿ ಮಾತನಾಡಿದ ಅವರು ಮತದಾನದ ಪವಿತ್ರತೆಯನ್ನು ಅರಿಯಲು ಮತದಾನ ದಿನಾಚರಣೆ ಆಚರಿಸಲಾಗುತ್ತಿದ್ದು, ಸಂವಿಧಾನದ ಆಶಯದಂತೆ ಮತ್ತು ಅದರ ಅನುಚ್ಛೇದನ ಅಡಿಯಲ್ಲಿ ಭಾರತ ಚುನಾವಣಾ ಆಯೋಗ ರಚನೆಯಾಯಿತು. 1950 ಜನೇವರಿ 25 ರಂದು ರಚನೆಗೊಂಡ ಈ ಕಾರ್ಯ ಇಂದಿದೆ 75 ವರ್ಷದ ಇತಿಹಾಸ ಹೊಂದಿದೆ. ಆದ್ದರಿಂದ ಇಂತಹ ಮಹತ್ವದ ಹಕ್ಕನ್ನು ಪ್ರತಿಯೊಬ್ಬರು ಚುನಾವಣೆ ಸಂದರ್ಭದಲ್ಲಿ ಚಲಾಯಿಸಬೇಕು ಎಂದರು.


ಮೂಲಭೂತ ಹಕ್ಕುಗಳಲ್ಲಿ ಮತದಾನ ಮಾಡುವುದು ಕೂಡಾ ಪ್ರತಿಯೊಬ್ಬರ ಹಕ್ಕಾಗಿದೆ. ಇಂದು ಭಾರತ ದೇಶದಲ್ಲಿ ನೂರು ಕೋಟಿ ಮತದಾರರ ಪೈಕಿ 18 ರಿಂದ 29ರ ನಡುವಿನ ವಯೋಮಿತಿಯ 21 ಯುವ ಮತದಾರ-ರಿದ್ದಾರೆ. ಅವರಲ್ಲಿ ಶೇ.35 ರಷ್ಟು ಮಾತ್ರ ಮತದಾನ ಮಾಡುತ್ತಿದ್ದಾರೆ. ಇವರೆಲ್ಲ-ರಿಗೂ ಮತದಾನ ಪವಿತ್ರತೆಯ ಬಗ್ಗೆ ಅರಿವು ಮೂಡಿಸಬೇಕಿದೆ. ಮತದಾನದ ಹಕ್ಕು ಒಬ್ಬ ಕೂಲಿ ಕಾರ್ಮಿಕರಿಂದ ಹಿಡಿದು ರಾಷ್ಟ್ರಪತಿಯವರೆಗೆ ಅದರ ಮೌಲ್ಯ ಒಂದೇ ಆಗಿರುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಮತದಾನದ ದಿನಾಚರಣೆ ಅಂಗವಾಗಿ ಪ್ರೌಢ, ಪದವಿ ಪೂರ್ವ ಹಾಗೂ ಪದವಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಪ್ರಬಂಧ, ಬಿತ್ತಿಚಿತ್ರ,ರ ರೀಲ್ಸ್ ಹಾಗೂ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನವನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ರುಥ-ರೀನ್ ಪಿ, ನ್ಯಾಯಾಧೀಶರಾದ ಕ್ರೀಷ್ಣಮೂರ್ತಿ ಪಡಸಲಗಿ, ಚಂದ್ರಶೇಖರ ದಿಡ್ಡಿ, ತೋವಿವಿಯ ಶಿಕ್ಷಣ ನಿರ್ದೇಶಕ ಎನ್. ಕೆ.ಹೆಗಡೆ, ವಿಸ್ತರಣಾಧಿಕಾರಿ ಮಹಾದೇವ ಮುರಗಿ, ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ಅಮರೇಶ ಪಮ್ಮಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

***

### ವಿವಿಧ ತರಬೇತುದಾರರಿಗೆ ಪ್ರಶಸ್ತಿ

ರಾಜ್ಯ ಮಟ್ಟದ ಉತ್ತಮ ತರಬೇತುದಾರರ ಪ್ರಶಸ್ತಿಗೆ ಆಯ್ಕೆಯಾದ ಸಂಗಮೇಶ ಸಣ್ಣತಂಗಿ, ಜಿಲ್ಲಾ ಮಟ್ಟದ ಪ್ರಶಸ್ತಿಗೆ ಆಯ್ಕೆಯಾದ ಲಕ್ಷ್ಮೀಕಾಂತ ಮಮದಾಪೂರ, ಸಿ.ಎಕ್ಸ್.ಸಂಗಮ, ಉತ್ತರ ಇಎಲ್‌ಸಿಗಳಾದ ಅರುಣಕುಮಾರ ಗಾಳಿ, ಜಿ.ಬಿ.ಕುಲಕರ್ಣಿ, ಸರಕಾರಿ ಪ್ರೌಢಶಾಲೆ ಸೀತಿಮನಿ, ಉತ್ತಮ ಎಎಲ್-ಎಂಟಿ ಉಮೇಶ ಗಣಿ, ಮತಗಟ್ಟೆ ಮಟ್ಟದ ಮೇಲ್ವಿಚಾರಕರಾದ ಶ್ರೀಕಾಂತ ಪಾಟೀಲ, ವಿಜಯಕುಮಾರ ದೇಶಮಾನೆ, ಉತ್ತಮ ಬಿ.ಎಲ್.ಓಗಳಾದ ಇಂದ್ರಾಬಾಯಿ ದೇಸಾಯಿ, ಬಳೂರಗಿ ಎಸ್.ಎಸ್. ಅವ-ರಿಗೆ ಪ್ರಶಸ್ತಿ ನೀಡಲಾಯಿತು.



ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

75 ವರ್ಷ ಸಂವಿಧಾನಕ್ಕೆ

ಗಾಂಧಿ ಭಾರತ

ನಾಡಿನ ಸಮಸ್ತ ಜನತೆಗೆ

# ಗಣರಾಜ್ಯೋತ್ಸವದ ಶುಭಾಶಯಗಳು

## ಭಾರತದ ಸಂವಿಧಾನ

### ಪ್ರಸ್ತಾವನೆ

ಭಾರತದ ಜನಗಳಾದ ನಾವು
ಭಾರತವನ್ನು ಒಂದು ಸಾರ್ವಭೌಮ ಸಮಾಜವಾದೀ
ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ
ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ;
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ:
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು
ಉಪಾಸನಾ ಸ್ವಾತಂತ್ರ್ಯ:
ಸ್ಥಾನಮಾನ ಹಾಗೂ ಅವಕಾಶ ಸಮಾನತೆ
ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು
ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ
ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು
ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ
ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ,
ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.

**ಫ್ಯಾಸಿಸಂ ಅನ್ನು** ತಿರಸ್ಕರಿಸೋಣ
**ಕೋಮುವಾದವನ್ನು** ಹಿಮ್ಮೆಟ್ಟಿಸೋಣ
**ಸಂವಿಧಾನವನ್ನು** ಬಲಪಡಿಸೋಣ
**ಪ್ರಜಾಪ್ರಭುತ್ವದ ಮೌಲ್ಯಗಳನ್ನು** ಎತ್ತಿಹಿಡಿಯೋಣ
ಬನ್ನಿ, **ಗಾಂಧಿ ಭಾರತವನ್ನು** ಮರುನಿರ್ಮಿಸೋಣ



"75 ವರ್ಷಗಳ ಹಿಂದೆ ಇದೇ ದಿನ ಭಾರತ ಸಂವಿಧಾನವನ್ನು ಅಂಗೀಕರಿಸಿ **ಸಾರ್ವಭೌಮ ಗಣರಾಜ್ಯವಾಯಿತು.** ಇಂದು ನಮ್ಮ ಗಣರಾಜ್ಯ ಮತ್ತು ನಮ್ಮ ಸಂವಿಧಾನ ಅಪಾಯದಲ್ಲಿದೆ. ಫ್ಯಾಸಿಸ್ಟ್ ಮತ್ತು ವಿಭಜಕ ಶಕ್ತಿಗಳು ನಮ್ಮ ರಾಷ್ಟ್ರದ ಒಕ್ಕೂಟ ವ್ಯವಸ್ಥೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ದುರ್ಬಲಗೊಳಿಸುತ್ತಿವೆ. **ನಮ್ಮ ಗಣರಾಜ್ಯವನ್ನು ಸಾರ್ವಭೌಮವನ್ನಾಗಿಸಲು ನಮ್ಮ ಬದ್ಧತೆಯನ್ನು ವ್ಯಕ್ತಪಡಿಸುವ ಸಮಯವಿದು. ಬನ್ನಿ, ಭಾಗಿಯಾಗೋಣ...**"

**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು



**ಶ್ರೀ ಡಿ.ಕೆ. ಶಿವಕುಮಾರ್**
ಮಾನ್ಯ ಉಪ ಮುಖ್ಯಮಂತ್ರಿಗಳು

ನಮ್ಮ ಕರ್ನಾಟಕ
ಗ್ಯಾರಂಟಿ ಕರ್ನಾಟಕ

ಶಕ್ತಿ — ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಅನ್ನಭಾಗ್ಯ — ಬಡವರಿಗೆ ಪ್ರತಿ ತಿಂಗಳು 10 kg
ಗೃಹ ಜ್ಯೋತಿ — ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಗೃಹಲಕ್ಷ್ಮಿ — ₹2000
ಯುವನಿಧಿ — ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ